ದಿ.08.02.2021ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣವಚನ ಬೋದಿಸಲಾಯ್ತು.

**ಪಾಟೀ ಸವಾಲುಃ 1ನೇ ಆರೋಪಿಯ ಪರ ವಕೀಲರಾದ ಶ್ರೀ ಎಂಆರ್‌ಎನ್‌ರವರಿಂದಃ** ನನಗೆ ಶಾಲಾ ವಿದ್ಯಾಭ್ಯಾಸ ಇಲ್ಲ. ನಾನು ವಿದ್ಯಾಭ್ಯಾಸ ಇಲ್ಲದೇ ಇದ್ದರೂ ದಾಖಲಾತಿಗಳಿಗೆ ಸಹಿ ಮಾಡುತ್ತೇನೆ. ಚಾಸಾ-4 ನಾರಾಯಣಸ್ವಾಮಿ ಚಿಕ್ಕಪ್ಪನ ಮಗ. ನನ್ನ ಮನೆಗೂ ನಾರಾಯಣಸ್ವಾಮಿರವರ ಮನೆಗೂ ಸುಮಾರು 200 ಅಡಿಗಳ ಅಂತರ ಇದೆ. ಚಾಸಾ-2 ಮತ್ತು ನಾರಾಯಣಸ್ವಾಮಿ ಒಂದೇ ಮನೆಯಲ್ಲಿ ವಾಸವಾಗಿರುತ್ತಾರೆ. ನಾರಾಯಣಸ್ವಾಮಿ ಮತ್ತು ಮುನಿರಾಜು ಇಬ್ಬರೂ ಅಣ್ಣತಮ್ಮಂದಿರು. ನಾರಾಯಣಸ್ವಾಮಿರವರ ಮನೆಯಲ್ಲಿ ಒಟ್ಟು ಆರು ಜನ ವಾಸವಾಗಿರುತ್ತಾರೆ. ನಾರಾಯಣಸ್ವಾಮಿ, ಚಿಕ್ಕವೆಂಕಟರಾಯಪ್ಪ, ವೆಂಕಟಮ್ಮ, ಮುನಿರಾಜಪ್ಪ, ಸಾವಿತ್ರಮ್ಮ, ಮುನಿರಾಜು ವಾಸವಾಗಿರುತ್ತಾರೆ. ಚಾಸಾ-3 ಮಂಜುನಾಥ ಮತ್ತು ನಾರಾಯಣಸ್ವಾಮಿರವರ ಮನೆ 2-3 ಮನೆಗಳ ಅಂತರದಲ್ಲಿ ಇರುತ್ತದೆ. ನಾರಾಯಣಸ್ವಾಮಿರವರ ಮನೆಯ ಒಂದು ಬಾಗಿಲು ನಂದಿ ದಿಕ್ಕಿಗೆ ಒಂದು ಬಾಗಿಲು ಪೂರ್ವಕ್ಕಿದೆ. ನಾರಾಯಣಸ್ವಾಮಿರವರ ಮನೆ ಮತ್ತು ಚಾಸಾ-5ರವರ ಮನೆ ಸುಮಾರು 50-60 ಅಡಿ ಅಂತರ ಇರುತ್ತದೆ. ಶ್ರೀನಿವಾಸ ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು ನೂರು ಅಡಿ ಅಂತರದಲ್ಲಿದೆ. ಚಾಸಾ-8 ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು 50 ಅಡಿ ಅಂತರ ಇರಬಹುದು. ಚಾಸಾ-9ರವರ ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು 300 ಅಡಿ ಅಂತರ ಇರಬಹುದು. ಚಾಸಾ-11ರವರ ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು 350ರಿಂದ 400 ಅಡಿ ಅಂತರ ಇರಬಹುದು. ಚಾಸಾ-12ರವರ ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು 80-90 ಅಡಿ ಅಂತರ ಇರಬಹುದು.

ಚಾಸಾ-13ರವರ ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು 300ರಿಂದ 400 ಅಡಿ ಅಂತರ ಇರಬಹುದು. ಚಾಸಾ-14ರವರ ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು 50-60 ಅಡಿ ಅಂತರ ಇರಬಹುದು. ಚಾಸಾ-17ರವರ ಮತ್ತು ನಾರಾಯಣಸ್ವಾಮಿರವರ ಮನೆ ಸುಮಾರು 400 ಅಡಿ ಅಂತರ ಇರಬಹುದು.

ನಮ್ಮ ಮನೆಯಲ್ಲಿ ನಾವು ನಾಲ್ಕು ಜನ ವಾಸವಾಗಿದ್ದು ನಾನು ವ್ಯವಸಾಯ ಮಾಡುತ್ತೇನೆ. ನನ್ನ ಜಮೀನಿಗೆ ನೀರಾವರಿ ವ್ಯವಸ್ಥೆ ಇದೆ. ಎರಡೂವರೆ ಎಕರೆ ನೀರಾವರಿ ಇದೆ. ಜಮೀನು ನನ್ನ ತಂದೆಯ ಹೆಸರಿನಲ್ಲಿತ್ತು ಅವರು ಮೃತರಾದ ನಂತರ ನನ್ನ ತಾಯಿ ಹೆಸರಿಗೆ ದಾಖಲೆ ಬದಲಾಗಿತ್ತು. ನಮ್ಮ ಮನೆಯಿಂದ ನೀರಾವರಿ ಜಮೀನು ಒಂದು ಫರ್ಲಾಂಗ್ ಅಂತರವಾಗುತ್ತದೆ. ನಾನು ಬೆಳಗ್ಗೆ 6 ಗಂಟೆಗೆ ಜಮೀನಿಗೆ ಹೋದರೆ ಮಧ್ಯಾಹ್ನ 12 ಗಂಟೆಯವರೆಗೆ ಜಮೀನಿನಲ್ಲಿ ಇರುತ್ತೇನೆ ಸಾಕ್ಷಿ ಮುಂದುವರಿದು ಪ್ರತಿ ದಿನ ಜಮೀನಿನಲ್ಲಿ ನೀರು ಕಟ್ಟುವುದಿಲ್ಲ ಎಂದು ಮುಂದುವರಿದು ನುಡಿದಿರುತ್ತಾರೆ. ನಾನು ಜಮೀನಿನ ಮೇಲುಸ್ತುವಾರಿ, ತರಕಾರಿ ತರುವುದು, ಬೇರೆ ಕೆಲಸಗಳನ್ನು ನೋಡಿಕೊಳ್ಳುತ್ತೇನೆ ನನ್ನ ತಮ್ಮ ಜಮೀನಿನಲ್ಲಿದ್ದು ಜಮೀನಿನ ಕೆಲಸಗಳನ್ನು ನೋಡಿಕೊಳ್ಳುತ್ತಾನೆ.

ಘಟನೆ ನಡೆದಿತ್ತು ಅನ್ನುವ ಸಮಯ 2010ರಲ್ಲಿ ನಾರಾಯಣಸ್ವಾಮಿರವರು ಹೊಸ ಮನೆ ನಿರ್ಮಾಣ ಮಾಡುತ್ತಿದ್ದರು. ಸದರಿ ಮನೆಯ ಬಳಿಯಲ್ಲಿಯೇ ಶೀಟ್ ಹಾಕಿಕೊಂಡು ವಾಸಮಾಡುತ್ತಿದ್ದರು ಎಂದು ಸಾಕ್ಷಿ ಮುಂದುವರಿದು ನುಡಿದಿರುತ್ತಾರೆ.

ಚಾಸಾ-4ರವರು ನಿರ್ಮಾಣ ಮಾಡುತ್ತಿದ್ದ ಮನೆಯ ನೆಲಮಹಡಿ ಮತ್ತು ಮೊದಲ ಮಹಡಿಯಲ್ಲಿ ಕಿಟಕಿ ಬಾಗಿಲುಗಳನ್ನು ಹಾಕಿದ್ದರು. ಹೊಸಮನೆಗೆ ಶೀಟ್ ಮನೆ ಹೊಂದಿಕೊಂಡಂತೆಯೇ ಇತ್ತು. ಹಳೇ ಶೀಟ್ ಮನೆಯಲ್ಲಿ ಚಾಸಾ-4 ವಾಸವಾಗಿದ್ದರು ಅದರ ಪಕ್ಕದಲ್ಲೆ ಹೊಸ ಮನೆ ನಿರ್ಮಾಣ ಮಾಡುತ್ತಿದ್ದರು. ಚಾಸಾ-4ರವರ ಮನೆಯ ಮುಂಭಾಗ 4-5 ಅಡಿಯ ಟಾರ್ ರಸ್ತೆ ಹಾದುಹೋಗಿರುತ್ತದೆ.

ಚಾಸಾ-4ರವರ ಮನೆಯ ಮುಂಭಾಗದಲ್ಲಿ ಅದೇ ಊರಿನವರು ಮತ್ತು ಬೇರೆ ಊರಿನವರು ಕಾಲ್ನಡಿಯಲ್ಲಿ ಮತ್ತು ವಾಹನದಲ್ಲಿ ಸಂಚಾರ ಮಾಡುತ್ತಾರೆ. ನಮ್ಮ ಊರಿನ ಜನರು ಸಹ ತಮ್ಮ ಹೊಲ-ಜಮೀನು, ಮನೆಗೆ ಆ ರಸ್ತೆಯಲ್ಲಿ ಓಡಾಡುತ್ತಾರೆ. ಚಾಸಾ-4ರವರ ಮನೆಯಿಂದ ಆಲದ ಮರ 400-450 ಅಡಿ ಅಂತರದಲ್ಲಿ ಇರುತ್ತದೆ ಎಂದರೆ ಸರಿಯಲ್ಲ 20 ಅಡಿ ಇಂತರದಲ್ಲಿ ಇರುತ್ತದೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ನಮ್ಮ ಊರಿನಲ್ಲಿ 80ರಿಂದ 85 ಮನೆಗಳು ಇವೆ. ನಮ್ಮ ಊರಿನಲ್ಲಿ ನಮ್ಮ ಪಂಗಡದವರದ್ದು 70ರಿಂದ 75 ಮನೆಗಳು ಇವೆ.

ಚಾಸಾ-4 ನಾರಾಯಣಸ್ವಾಮಿ ಘಟನೆ ಸಮಯದಲ್ಲಿ ವಕೀಲರಾಗಿರಲಿಲ್ಲ ಈಗ ಆಗಿರಬಹುದು. ಘಟನೆ ಸಮಯದಲ್ಲಿ ಚಾಸಾ-4 ಬೆಂಗಳೂರಿನಲ್ಲಿ ವಾಸವಾಗಿದ್ದರು. ಚಾಸಾ-4ರವರಿಗೆ ಘಟನೆ ಸಮಯದಲ್ಲಿ ವಿವಾಹವಾಗಿರಲಿಲ್ಲ, ಚಾಸಾ-4 ಎರಡು ಮೂರು ದಿನಗಳಿಗೊಮ್ಮೆ ಆತ ಊರಿಗೆ ಬರುತ್ತಿದ್ದರು. ನಾನು, ಚಾಸಾ-4ರವರ ಮನೆಗೆ ಆಗಾಗ್ಗೆ ಹೋಗುತ್ತಿದ್ದೆ.

ಚಾಸಾ-4ರವರಿಗೆ ನಾಲ್ಕು ಪ್ರಕರಣಗಳಲ್ಲಿ ಶಿಕ್ಷೆಯಾಗಿರುವ ವಿಚಾರ ನನಗೆ ಗೊತ್ತಿಲ್ಲ. ಚಾಸಾ-4ರವರ ಕೆಲವು ವೈಯಕ್ತಿಕ ವಿಚಾರಗಳು ಗೊತ್ತು ಪ್ರಕರಣಗಳ ಬಗ್ಗೆ ಗೊತ್ತಿಲ್ಲ. ಚಾಸಾ-4ರವರು ಈಗ ವಕೀಲ ವೃತ್ತಿ ಮಾಡುತ್ತಿದ್ದಾರೆ.

ಈ ಪ್ರಕರಣದ 1, 9, 12ನೇ ಆರೋಪಿಗಳು ಪಂಡಿತಪುರದವರು. 2ನೇ ಆರೋಪಿ ಬೊಮ್ಮವಾರ ಗ್ರಾಮದವರು. ಪಂಡಿತಪುರಕ್ಕೂ ದ್ಯಾವರಹಳ್ಳಿಗೂ ಸುಮಾರು ಎರಡರಿಂದ ಎರಡೂವರೆ ಕಿಮೀ ಅಂತರ ಇದೆ. ಅಡ್ಡದಾರಿಯಿಂದ 2ಕಿಮೀ ಅಂತರದಲ್ಲಿ ಇದೆ. ಬೊಮ್ಮವಾರಕ್ಕೂ ದ್ಯಾವರಹಳ್ಳಿಗೂ 8-9 ಕಿಮೀ ಅಂತರ ಇದೆ. 3ನೇ ಆರೋಪಿ ಬಾಗಲೂರು ಗ್ರಾಮದವರು. ಬಾಗಲೂರಿಗೆ ದ್ಯಾವರಹಳ್ಳಿಗೂ 16-18 ಕಿಮೀ ಅಂತರ ಇರಬಹುದು.

ಘಟನೆ ನಡೆದಿತ್ತು ಅನ್ನುವ ದಿನ ರಸ್ತೆಯಲ್ಲಿ ಸಾರ್ವಜನಿಕರು ಯಾರೂ ಇರಲಿಲ್ಲ. ನಾನು, ಗಂಗಪ್ಪ ಮತ್ತು ಮುನಿರಾಜು ಸ್ಥಳದಲ್ಲಿದ್ದೆವು. ಬೆಳಗ್ಗೆ 08.00-08.30ರಿಂದ ಬೆಳಗ್ಗೆ 10.00-10.30ರ ಸಮಯದವರೆಗೆ ಘಟನೆ ನಡೆದ ಸ್ಥಳದಲ್ಲಿ ನಾವು ಮೂವರು ಇದ್ದೆವು. ನಾವು ಆ ಸ್ಥಳದಲ್ಲಿದ್ದಾಗ ಆ ಸಮಯದ ಒಳಗೆ ಪೋಲಿಸರು ಬಂದಿರಲಿಲ್ಲ. ನಾನು ಗಲಾಟೆ ನಡೆದ ಕೂಡಕೇ ವಿಶ್ವನಾಥಪುರ ಪೋಲಿಸ್ ಠಾಣೆಗೆ ಅಥವಾ ಬೇರೆ ಯಾವುದೇ ಠಾಣೆಗೆ ಫೋನ್ ಮಾಡಿರಲಿಲ್ಲ. ದ್ಯಾವರಹಳ್ಳಿಗೂ ವಿಶ್ವನಾಥಪುರಕ್ಕೂ 2-2.5ಕಿಮೀ ಅಂತರ ಇದೆ. ಪೋಲಿಸರು ಎಷ್ಟು ಘಂಟೆಗೆ ಸ್ಥಳಕ್ಕೆ ಬಂದಿದ್ದರೋ ಎಷ್ಟು ಘಂಟೆಗೆ ವಾಪಸ್ಸು ಹೋಗಿದ್ದರೋ ನಾವು ಆಸ್ಪತ್ರೆಯಲ್ಲಿದ್ದ ಕಾರಣ ಗೊತ್ತಿಲ್ಲ.

ನಾನು ದೇವನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆ. ದೇವನಹಳ್ಳಿ ಆಸ್ಪತ್ರೆಗೆ ಹೋಗಲು ವಿಶ್ವನಾಥಪುರ ಪೋಲಿಸ್ ಠಾಣೆಯನ್ನು ಹಾದುಕೊಂಡೇ ಹೋಗಬೇಕು. ನಾವು ಏಳು ಜನರು ಒಂದೇ ಗಾಡಿಯಲ್ಲಿ ಆಸ್ಪತ್ರೆಗೆ ಹೋಗಿದ್ದೆವು. ದೇವನಹಳ್ಳಿ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿರಲಿಲ್ಲ ಎಂದರೆ ಸರಿಯಲ್ಲ ನಾನು ಒಂದು ದಿನಒಳರೋಗಿಯಾಗಿ ದಾಖಲಾಗಿದ್ದೆ. ಆ ದಿನ 11 ಗಂಟೆಗೆ ಆಸ್ಪತ್ರೆಗೆ ಹೋಗಿದ್ದೆ. ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು, ಮೂರು ಜನ ಮೃತರಾದರು ಉಳಿದ ಮೂರು ಜನರು ಆಸ್ಪತ್ರೆಯಲ್ಲಿ ದಾಖಲಾಗಿದ್ದೆವು. ನಾನು, ಮಂಜುನಾಥ, ಮುನಿರಾಜು ಆಸ್ಪತ್ರೆಯಲ್ಲಿ ದಾಖಲಾಗಿದ್ದೆವು.

ನಾನು ಯಾವ ದಿನಾಂಕ ಆಸ್ಪತ್ರೆಗೆ ದಾಖಲಾಗಿದ್ದೆ ಯಾವ ದಿನಾಂಕ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದೆ ಹೇಳಲು ಸಾಧ್ಯವಿಲ್ಲ ಆದರೆ ಶುಕ್ರವಾರ ಆಸ್ಪತ್ರೆಗೆ ದಾಖಲಾಗಿ ಶನಿವಾರ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದೆ. ನಾನು ಆಸ್ಪತ್ರೆಯಲ್ಲಿ ಇರುವವರೆಗೂ ಪೋಲಿಸರು ಆಸ್ಪತ್ರೆಗೆ ಬಂದಿರಲಿಲ್ಲ ನಾನು ಬೆಂಗಳೂರಿಗೆ ನನ್ನ ತಂದೆಯನ್ನು ಕರೆದುಕೊಂಡು ಹೋಗಿದ್ದೆ. ನಾನು ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿದ್ದಾಗ ಮುನಿರಾಜಪ್ಪ ಮತ್ತು ಮಂಜುನಾಥರವರನ್ನು ಪೋಲಿಸರು ವಿಚಾರಣೆ ಮಾಡಿರಲಿಲ್ಲ. ದೇವನಹಳ್ಳಿ ಆಸ್ಪತ್ರೆಯಲ್ಲಿ ವೈದ್ಯರು ನನ್ನನ್ನು ವಿಚಾರಣೆ ಮಾಡಿದ್ದರು ವೈದ್ಯರ ಹೆಸರು ನನಗೆ ಈಗ ಹೇಳಲು ಸಾಧ್ಯವಿಲ್ಲ. ನಾನು ವೈದ್ಯರ ಬಳಿ ಯಾವುದೇ ಆರೋಪಿಗಳ ಹೆಸರನ್ನು ಹೇಳಿರಲಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಹತ್ತು ಜನ ಆರೋಪಿಗಳ ಹೆಸರನ್ನು

ಹೇಳಿದ್ದೆ ಎಂದು ಮುಂದುವರಿದು ನುಡಿದಿರುತ್ತಾರೆ. ವೈದ್ಯರು ನಾನು ಹೇಳಿದ ಆರೋಪಿಗಳ ಹೆಸರನ್ನು ಬರೆದುಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ಗಲಾಟೆಯಾದ ಎರಡು ದಿನಕ್ಕೆ ನಾನು ಮೊದಲ ಬಾರಿಗೆ ಪೋಲಿಸ್ ಠಾಣೆಗೆ ಹೋಗಿದ್ದೆ. ಬೇರೆ ಯಾರಾದರೂ ನಮ್ಮ ಗುಂಪಿನಲ್ಲಿ ಪೋಲಿಸ್ ಠಾಣೆಗೆ ಹೋಗಿದ್ದರೋ ನನಗೆ ಗೊತ್ತಿಲ್ಲ ಚಾಸಾ-4 ನಾರಾಯಣಸ್ವಾಮಿ ಹೋಗಿರಬಹುದು. ಚಾಸಾ-4 ಪೋಲಿಸ್ ಠಾಣೆಗೆ ಹೋಗಿದ್ದರು. ಘಟನೆ ನಡೆದ ನಂತರ ಮೂರು ಘಂಟೆಗೆ ಪೋಲಿಸ್ ಠಾಣೆಗೆ ನಾನು ಮತ್ತು ಚಾಸಾ-4 ದೂರು ಕೊಡಲು ಹೋಗಿದ್ದೆವು. ಪೋಲಿಸರು ದೂರನ್ನು ಬರವಣಿಗೆ ಮಾಡಿರಲಿಲ್ಲ, ನಾನು ದೂರು ನೀಡಿದ್ದೆ ಚಾಸಾ-4 ಸಹ ನನ್ನೊಂದಿಗಿದ್ದರು ಆತ ದೂರು ನೀಡಿರಲಿಲ್ಲ, ಪೋಲಿಸರು ದೂರು ಬರೆಸಿಕೊಂಡು ಬರುವಂತೆ ಹೇಳಿದ್ದರು ಆದ್ದರಿಂದ ನಾನು ಠಾಣೆಯಿಂದ ಹೋಗಿ ದೂರು ಬರವಣಿಗೆ ಮಾಡಿಸಿಕೊಂಡು ನಂತರ ದೂರು ನೀಡಿದ್ದೆ. ಚಾಸಾ-4 ನಾರಾಯಣಸ್ವಾಮಿರವರಿಗೆ ನಾನು ದೂರು ಹೇಳಿ ಬರೆಸಿದ್ದೆ. ನಾನು ದೂರನ್ನು ಓದಿರಲಿಲ್ಲ ಸಾಕ್ಷಿ ಚಾಸಾ-4ರವರ ಕೈಯಲ್ಲಿ ದೂರನ್ನು ಓದಿಸಿ ಕೇಳಿದ್ದೆ ಎಂದು ಮುಂದುವರಿದು ನುಡಿದಿರುತ್ತಾರೆ.

"ಆ ದಿನ ನನ್ನ ತಮ್ಮ ನಾರಾಯಣಸ್ವಾಮಿ ಬರೆದ ದೂರಿನ ಅಂಶಗಳನ್ನು ಓದಿಸಿ ತಿಳಿಯದೇ ನಾನು ಸಹಿ ಮಾಡಿಕೊಟ್ಟಿದ್ದು ನಾನು ಈ ದಿನ ದೂರಿನ ಪ್ರತಿ ನೋಡಿದ್ದು ಅದರಲ್ಲಿರುವ ಸಹಿ ನನ್ನದಾಗಿರುತ್ತೆ" ಎಂದು ದಿಃ21.02.2010ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ, ಸದರಿ ಭಾಗವನ್ನು ನಿಡಿ-1

ಎಂದು ಗುರುತು ಮಾಡಲಾಯಿತು. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆಯಲ್ಲಿ ಏನು ಬರವಣಿಗೆ ಮಾಡಿದ್ದಾರೋ ನನಗೆ ಗೊತ್ತಿಲ್ಲ ಘಟನೆಯ ವಿಚಾರವನ್ನು ನಾನು ಹೇಳಿದ್ದೆ.

ಬೆಳಿಗ್ಗೆ 8.00 ಗಂಟೆಗೆ ನಾನು ಮತ್ತು ಗಂಗಪ್ಪ, ಮುನಿರಾಜು ರವರುಗಳು ನಾರಾಯಣಸ್ವಾಮಿ ಮನೆಯ ಹತ್ತಿರ ಇದ್ದೆವು ಎಂದು ದೂರಿನಲ್ಲಿ ಬರವಣಿಗೆ ಮಾಡಿರುತ್ತದೆಯೋ ಇಲ್ಲವೋ ನನಗೆ ನೆನಪಿಲ್ಲ ನಾನು ನಾರಾಯಣಸ್ವಾಮಿಗೆ ಹೇಳಿದ್ದೆ. ಅವರಿಬ್ಬರು ನಮ್ಮ ಜೊತೆಗಿದ್ದ ಮುನಿರಾಜುವನ್ನು ನಾರಾಯಣಸ್ವಾಮಿ ಅವರಿಗೆ ಹಣ ಕೊಡಬೇಕೆಂದು ನಾರಾಯಣಸ್ವಾಮಿ ಎಲ್ಲಿದ್ದಾರೆಂದು ಕೇಳಿದರು ಅದಾದ 10-20 ನಿಮಿಷಕ್ಕೆ ನಾರಾಯಣಸ್ವಾಮಿ ಅಲ್ಲಿಗೆ ಬಂದರು ಎಂದು ನಾನು ನಾರಾಯಣಸ್ವಾಮಿಗೆ ಹೇಳಿದ್ದೆ ದೂರಿನಲ್ಲಿ ನಮೂದಾಗಿದೆಯೇ ಇಲ್ಲವೋ ಗೊತ್ತಿಲ್ಲ. ಗಾಡಿಯನ್ನು ಅಲ್ಲೇ ಬಿಟ್ಟು ನಡೆದುಕೊಂಡು ನಮ್ಮೂರ ಒಳಗೆ ಹೋದರು ಎಂದು ನಾನು ದೂರು ಬರೆಸುವಾಗ ನಾರಾಯಣಸ್ವಾಮಿಗೆ ಹೇಳಿದ್ದೆ ಚಾಸಾ-4 ಬರೆದಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

ಬೆಳಿಗ್ಗೆ 9.45 ಗಂಟೆಗೆ ನಾಲ್ಕು ಬೈಕ್‌ಗಳಲ್ಲಿ ಮತ್ತು ಎರಡು ಕಾರುಗಳಲ್ಲಿ 19 ಜನರು ನಾರಾಯಣಸ್ವಾಮಿಯ ಮನೆಯ ಹತ್ತಿರ ಬಂದರು ಆಗ ನಾನು, ಗಂಗಪ್ಪ, ಮುನಿರಾಜು, ನಾರಾಯಣಸ್ವಾಮಿ, ದೊಡ್ಡಚಿನ್ನಪ್ಪ, ದೇವರಾಜಪ್ಪ, ಗಾಯಿತ್ರಮ್ಮ ಮಾತನಾಡಿಕೊಂಡು ನಿಂತಿದ್ದೇವು ಆ 19 ಜನರು ಲಾಂಗ್, ಚಾಕು, ಚೂರಿ, ದೊಣ್ಣೆ ಇವುಗಳನ್ನು ಹಿಡಿದುಕೊಂಡು ಬಂದಿದ್ದರು ಆಗ ಆರೋಪಿ ಮಂಜುನಾಥ

ನಾರಾಯಣಸ್ವಾಮಿ ವಡ್ಡ ನನ್ನ ಮಗನೆ ಎಂದು ಜಾತಿನಿಂದನೆ ಮಾಡಿ ಕೈಯಲ್ಲಿ ಕೆನ್ನೆಗೆ ಹೊಡೆದನು ಎಂದು ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿ. ಆರೋಪಿ ನಾಗೇಶ್‌ಗೌಡ ನನ್ನ ತಂದೆಗೆ ಹೊಟ್ಟೆಯ ಮೇಲೆ ಚೂರಿಯಿಂದ ತಿವಿದನು ಎಂದು ದೂರಿನಲ್ಲಿ ಬರವಣಿಗೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಆ ಸಮಯದಲ್ಲಿ ನಾಗೇಶಗೌಡರ ಹೆಸರು ಗೊತ್ತಿಲ್ಲದ ಕಾರಣ ದೂರಿನಲ್ಲಿ ಬರೆಸಿರಲಿಲ್ಲ. ನಾರಾಯಣಸ್ವಾಮಿ ಅವರಿಗೆ ಏಟು ಬೀಳುತ್ತಿದ್ದ ಹಾಗೆ ನನ್ನ ತಂದೆ, ಗಾಯಿತ್ರಮ್ಮ ಮತ್ತು ದೇವರಾಜುರವರುಗಳು ನಾರಾಯಣಸ್ವಾಮಿಯನ್ನು ಮನೆಯೊಳಗೆ ಹಾಕಿ ಚಿಲಕ ಹಾಕಿದರು ಎಂದು ನನ್ನ ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ತಿಮ್ಮಯ್ಯ ಗಾಯಿತ್ರಮ್ಮನಿಗೆ ಚಾಕುವಿನಿಂದ ಹೊಟ್ಟೆಗೆ ತಿವಿದನು, ಅದರಿಂದ ಅವರಿಗೆ ರಕ್ತಗಾಯವಾಯಿತು ಎಂದು ನನ್ನ ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ಮುನಿಶ್ಯಾಮಪ್ಪನ ಮಗ ಮುನಿರಾಜು ಚಾಕುವಿನಿಂದ ನನ್ನ ಎಡ ಸೊಂಟದಲ್ಲಿ ತಿವಿದನು ಎಂದು ನನ್ನ ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ನಾಗೇಶಗೌಡ ನನಗೆ ಸೊಂಟದ ಅದೇ ಜಾಗಕ್ಕೆ ಚಾಕುವಿನಿಂದ ತಿವಿದನು ಆರೋಪಿ ರಾಮಚಂದ್ರಪ್ಪ ನನ್ನ ಬಲಗಾಲಿಗೆ ಮತ್ತು ಹೊಟ್ಟೆಗೆ ದೊಣ್ಣೆಯಿಂದ ಹೊಡೆದನು ಎಂದು ನನ್ನ ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ.

ಮುನಿರಾಜುವಿಗೆ ದೊಣ್ಣೆಗಳಿಂದ ತಲೆಗೆ ಹೊಡೆದರು ಆಗ ನನ್ನ ತಮ್ಮ ಮಂಜುನಾಥ ತೋಟದ ಕಡೆಯಿಂದ ಓಡಿ ಬಂದನು ಆಗ ಎಲ್ಲಾ ಆರೋಪಿಗಳು ಅಲ್ಲೇ ಇದ್ದರು ಊರಿನ ಜನರೆಲ್ಲಾ ಅಲ್ಲಿಗೆ ಬಂದರು ಆರೋಪಿಗಳಾದ ರಾಮಚಂದ್ರಪ್ಪ,

ಆನಂದಗೌಡ, ನಾಗೇಶಗೌಡ ಬೈಕ್‌ಗಳಲ್ಲಿ ಕುಳಿತ್ತಿದ್ದರು ಎಂದು ನನ್ನ ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ಬಿದ್ದುಹೋದ ನಾಗೇಶಗೌಡ ಎದ್ದು ಬಂದು ಮಂಜುನಾಥನಿಗೆ ಚಾಕುವಿನಿಂದ ತಲೆಗೆ ಹೊಡೆದನು ನನ್ನ ತಮ್ಮನ ಸೊಂಟಕ್ಕೆ ಮತ್ತು ತಲೆಗೆ ರಕ್ತಗಾಯವಾಯಿತು ಗುರುಮೂರ್ತಿ ಮಗ ವೆಂಕಟೇಶ ದೊಣ್ಣೆಯಿಂದ ತಲೆಗೆ ಹೊಡೆದನು ನಂತರ ಅಲ್ಲಿದ್ದ ಆರೋಪಿಗಳೆಲ್ಲಾ ಬೈಕ್‌ಗಳಲ್ಲಿ ಮತ್ತು ಕಾರುಗಳಲ್ಲಿ ಹೊರಟುಹೋದರು ಎಂದು ನನ್ನ ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾರೋ ಚಿಲಕ ಹಾಕಿದ್ದ ಬಾಗಿಲನ್ನು ತೆಗೆದಿದ್ದರಿಂದ ನಾರಾಯಣಸ್ವಾಮಿ ಮನೆಯಿಂದ ಹೊರಗೆ ಬಂದನು ನಾರಾಯಣಸ್ವಾಮಿ ಗಾಯಾಳುಗಳನ್ನೆಲ್ಲಾ ಸ್ಕಾಪ್ರಿಯೋ ವಾಹನದಲ್ಲಿ ದೇವನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದನು ಎಂದು ನನ್ನ ದೂರಿನಲ್ಲಿ ಬರವಣಿಗೆ ಮಾಡಿಲ್ಲ ಎಂದರೆ ಸರಿಯಲ್ಲ.

ನಾನು ಠಾಣೆಗೆ ದೂರು ಕೊಡಲು ಹೋದಾಗ ಚಾಸಾ-4ರವರ ಹೇಳಿಕೆಯನ್ನು ನನ್ನ ಸಮಕ್ಷಮ ಪೋಲಿಸರು ಬರೆದುಕೊಂಡಿರಲಿಲ್ಲ. ಎಷ್ಟು ಪುಟಗಳ ದೂರು ಬರೆಸಿದ್ದೆ ಗೊತ್ತಿಲ್ಲ ಎಂದು ಸಾಕ್ಷಿ ಚಾಸಾ-4ರವರು 2-3 ಪುಟಗಳಲ್ಲಿ ದೂರು ಬರೆದಿದ್ದರು. ನಾನು ದೂರಿನ ಒಂದು ಪುಟದ ಒಂದು ಕಡೆಯಲ್ಲಿ ಮಾತ್ರ ಸಹಿ ಮಾಡಿದ್ದೆ. ನಾನು ಪೋಲಿಸ್ ಠಾಣೆಯಲ್ಲಿ ಬಟ್ಟೆ ಕೊಟ್ಟು ಬರುವಾಗ ಒಂದು ಸಹಿ ಮಾಡಿದ್ದೆ.

1ನೇ ಆರೋಪಿ ತಿಮ್ಮಯ್ಯ ಮತ್ತು 12ನೇ ಆರೋಪಿ ವೇಣುಗೋಪಾಲ ಗೊತ್ತು. ತಿಮ್ಮಯ್ಯ ಇಟ್ಟಿಗೆ ವ್ಯಾಪಾರ ಮಾಡುತ್ತಾರೆ. ತಿಮ್ಮಯ್ಯರವರಿಗೆ ಇಟ್ಟಿಗೆ ಗೂಡು ಇಲ್ಲ

ಇಟ್ಟಿಗೆ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ಇಟ್ಟಿಗೆ ಗೂಡಿನ ದಾಖಲಾತಿ ನಾನು ನೋಡಿಲ್ಲ. ಚಾಸಾ-4 ಮತ್ತು 1ನೇ ಆರೋಪಿಯ ಮಧ್ಯೆ ಇಟ್ಟಿಗೆ ವ್ಯವಹಾರದ ಕಾಸು ಕೊಡುವ ವಿಚಾರ ಬಿಟ್ಟು ಅವರಿಬ್ಬರ ಬೇರೆ ವ್ಯವಹಾರಗಳು ನನಗೆ ಗೊತ್ತಿಲ್ಲ. ನಾನು ಚಾಸಾ-4ರವರಿಗೆ ಇಟ್ಟಿಗೆ ಸರಬರಾಜು ಮಾಡಿಲ್ಲ. 12ನೇ ಆರೋಪಿ ವೇಣುಗೋಪಾಲ ಮತ್ತು ಚಾಸಾ-4ರವರಿಗೆ ಏನು ವ್ಯವಹಾರ ಇತ್ತೋ ಗೊತ್ತಿಲ್ಲ. ಚಾಸಾ-4ರವರ ಮನೆಯ ವ್ಯವಹಾರವನ್ನು ಆತನ ತಂದೆ ಚಿಕ್ಕವೆಂಕಟರಾಯಪ್ಪ ಮತ್ತು ಅಣ್ಣ ನೋಡಿಕೊಳ್ಳುತ್ತಾರೆ.

ನಾನು ದೂರು ಕೊಡುವ ದಿನ 3.00ಕ್ಕೆ ಠಾಣೆಗೆ ಹೋಗಿದ್ದು ಸುಮಾರು ಅರ್ಧ ಘಂಟೆ ಠಾಣೆಯಲ್ಲಿದ್ದು ದೂರು ನೀಡಿ ನಂತರ ಸುಮಾರು 03.30ಕ್ಕೆ ಆಸ್ಪತ್ರೆಗೆ ಹೋಗಿ ದಾಖಲಾಗಿದ್ದೆ. ನಾನು ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ದೂರು ನೀಡಿದ ನಂತರ ದಾಖಲಾಗಿದ್ದೆ. ವೈದ್ಯರೇ ದೂರು ಕೊಟ್ಟು ವಾಪಸ್ಸು ಆಸ್ಪತ್ರೆಗೆ ಬರುವಂತೆ ಹೇಳಿದ್ದರು. ವೈದ್ಯರು ಪೋಲಿಸ್ ಠಾಣೆಗೆ ಘಟನೆ ಬಗ್ಗೆ ಫೋನ್ ಮೂಲಕ ಮಾಹಿತಿ ನೀಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಘಟನೆ ನಡೆದ ದಿನವೇ ನಾನು ಬೆಂಗಳೂರಿಗೆ ಹೋಗಿದ್ದೆ.

ದಿಃ10.02.2010ರಂದು 1ನೇ ಆರೋಪಿ Peace Hospital ಬೆಂಗಳೂರಿನಲ್ಲಿ ಟೈಫಾಯಿಡ್ ಖಾಯಿಲೆಯಿಂದ ದಾಖಲಾಗಿ ದಿಃ16.02.2010ರಂದು ಬಿಡುಗಡೆಯಾಗಿದ್ದರು ಎಂದರೆ ಗೊತ್ತಿಲ್ಲ. 1ನೇ ಆರೋಪಿ ಮತ್ತು ಚಾಸಾ-4ರವರ ಮಧ್ಯೆ ಇಟ್ಟಿಗೆ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. 1 ಮತ್ತು 12ನೇ ಆರೋಪಿಗಳು ಘಟನೆ ದಿನ ಸ್ಥಳಕ್ಕೆ

ಬಂದಿರಲಿಲ್ಲ ಗಲಾಟೆಗೂ ಅವರಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಿಃ12.02.2010ರಂದು 1ನೇ ಆರೋಪಿ ಬೆಳಗ್ಗೆ ಚಾಸಾ-4ರವರ ಮನೆಯ ಬಳಿಗೆ ಬಂದಿರಲಿಲ್ಲ ಹಣ ಕೇಳಿರಲಿಲ್ಲ ಮತ್ತೆ ವಾಪಸ್ಸು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ಬೆಳಗ್ಗೆ 09.45ಕ್ಕೆ 1ನೇ ಆರೋಪಿ ಮತ್ತು ಇತರ 19 ಮಂದಿ ಬೈಕ್‌ಗಳಲ್ಲಿ ಚಾಸಾ-4ರವರ ಮನೆಯ ಬಳಿಗೆ ಬಂದಿರಲಿಲ್ಲ ಚಾಸಾ-4ರವರೊಂದಿಗೆ ಗಲಾಟೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಮೃತ ಗಾಯಿತ್ರಮ್ಮರವರಿಗೆ ಚಾಕುವಿನಿಂದ ಹೊಟ್ಟೆಗೆ ಚುಚ್ಚಿದ್ದರು ಎಂದು ಸುಳ್ಳು ಕಥೆ ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ದೂರಿನಲ್ಲಿ ನಮೂದು ಮಾಡಿರುವಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸುಳ್ಳು ವಿಚಾರಗಳನ್ನು ಚಾಸಾ-4 ಸೃಷ್ಟಿಸಿ ಬರವಣಿಗೆ ಮಾಡಿ, ಆತನ ಚಿತಾವಣೆಯ ಮೇರೆಗೆ ನಾನು ಸುಳ್ಳು ದೂರು ನೀಡಿದ್ದೆ ಎಂದರೆ ಸರಿಯಲ್ಲ.

ದಿಃ21.02.2010ರಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ. ಶಾಂತಕುಮಾರ, ವೆಂಕಟಪ್ಪ, ನಾರಾಯಣಸ್ವಾಮಿ, ಕತ್ತೆ ಮುನಿಯಪ್ಪನ ಮಗ ನಾರಾಯಣಸ್ವಾಮಿ, ಮುನಿರಾಜು, ವೆಂಕಟೇಶ ಗಲಾಟೆಗೆ ಬಂದಿರಲಿಲ್ಲ ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಡಿ-2 ಎಂದು ಗುರುತು ಮಾಡಲಾಯಿತು. 1 ಮತ್ತು 12ನೇ ಆರೋಪಿಗಳು ಗಾಯಿತ್ರಮ್ಮರವರಿಗೆ ಚಾಕುವಿನಿಂದ ಹಲ್ಲೆ ಮಾಡಿರಲಿಲ್ಲ 9ನೇ ಆರೋಪಿ ಕೇಬಲ್ ಕುಮಾರ ಗಾಯಿತ್ರಮ್ಮರವರಿಗೆ ಹಲ್ಲೆ ಮಾಡಿದ್ದು ಎಂದರೆ ಸರಿಯಲ್ಲ.

**ಆರೋಪಿ 3, 7, 11, 13 ಮತ್ತು 14ನೇ ಆರೋಪಿಗಳ ಪರ ಶ್ರೀ ಕೆಟಿಜೆ ವಕೀಲರಿಂದಃ** ಘಟನೆಯಾದ ದಿನ 19 ಮಂದಿ ನಮ್ಮ ಊರಿಗೆ ಬಂದಿದ್ದರು. ಎರಡು ಕಾರ್ ಮತ್ತು ನಾಲ್ಕು ಬೈಕ್‌ನಲ್ಲಿ ಹತ್ತೊಂಬತ್ತು ಜನ ಬಂದಿದ್ದರು. ಬಂದ ವ್ಯಕ್ತಿಗಳಲ್ಲಿ ನನಗೆ ಹತ್ತು ಜನ ಪರಿಚಯಸ್ಥರು. ಉಳಿದ ವ್ಯಕ್ತಿಗಳನ್ನು ನಾನು ಘಟನೆಗಿಂತ ಮೊದಲು ನೋಡಿರಲಿಲ್ಲ. ನಾನು ದೂರಿನಲ್ಲಿ ಹತ್ತೊಂಬತ್ತು ಜನರು ಬಂದಿದ್ದರು ಮತ್ತು ಎಷ್ಟು ವಾಹನಗಳಲ್ಲಿ ಬಂದಿದ್ದರು ಎಂದು ಬರವಣಿಗೆ ಮಾಡಿಸಿದ್ದೆ. ಉಳಿದ 9 ಜನರ ಹೆಸರು ನನಗೆ ಘಟನೆಯ ದಿನ ಗೊತ್ತಿರಲಿಲ್ಲ. ನಾನು ಉಳಿದ ಒಂಬತ್ತು ಜನರು ಹಾಕಿದ್ದ ಬಟ್ಟೆ ಮತ್ತು ಚಹರೆಗಳನ್ನು ನಾನು ಪೋಲಿಸರಿಗೆ ಹೇಳಿರಲಿಲ್ಲ. 10 ಜನರ ಹೆಸರು ಮತ್ತು ಇತರರು ಎಂದು ಬರೆಸಿದ್ದೆ.

ನಾನು ವೈದ್ಯರ ಮುಂದೆ ಹತ್ತೊಂಬತ್ತು ಜನರು ಬಂದಿದ್ದರು ಕೆಲವರ ಹೆಸರು ಗೊತ್ತಿಲ್ಲ ಎಂದು ಹೇಳಿದ್ದೆ. ಯಾವ ಯಾವ ಜನರು ಯಾವ ಯಾವ ಗಾಡಿಯಲ್ಲಿ ಬಂದಿದ್ದರು ಎಂದು ಘಟನೆ ನಡೆದು ಹನ್ನೊಂದು ವರ್ಷವಾಗಿರುವುದರಿಂದ ನಿಖರವಾಗಿ ನನಗೆ ಹೇಳಲು ಸಾಧ್ಯವಿಲ್ಲ. ಯಾರ ಕೈಯಲ್ಲಿ ಯಾವ ಆಯುಧಗಳಿತ್ತು ಎಂದು ನನಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ದೂರು ಕೊಡುವಾಗ ಉಳಿದ ಒಂಬತ್ತು ಜನರು ಎಂದು ಹೇಳಿದ್ದೆ ಅವರ ಬಗ್ಗೆ ಪೂರ್ಣ ವಿವರ ನೀಡಿರಲಿಲ್ಲ.

ನನ್ನ ದೂರಿನಲ್ಲಿ 3ನೇ ಆನಂದಗೌಡ ಕಾಲಿನಿಂದ ಒದ್ದಿದ್ದರು ಎಂದು ಹೇಳಿ ಬರೆಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ವಾಪಸ್ಸು ಹೋಗುವಾಗ 3ನೇ

ಆರೋಪಿ ಆನಂದಗೌಡ ಬೈಕ್ ಹತ್ತಿ ಹೋಗಿದ್ದರು ಎಂದು ಹೇಳಿ ಬರೆಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ 7ನೇ ಆರೋಪಿ ಭೈರೆಗೌಡ ಕತ್ತೆ ಮುನಿಯಪ್ಪನ ಮಗ ನಾರಾಯಣಸ್ವಾಮಿಗೆ ದೊಣ್ಣೆಯಿಂದ ಹಲ್ಲೆ ಮಾಡಿದ್ದರು ಎಂದು ಹೇಳಿ ಬರೆಸಿರಲಿಲ್ಲ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ನನ್ನ ತಮ್ಮ ಮಂಜುನಾಥ ಬೈಕ್‌ಅನ್ನು ತಳ್ಳಿದಾಗ ಬೈಕ್ ಬಿದ್ದು ಹೋಗಿತ್ತು ಎಂದು ಹೇಳಿ ಬರೆಸಿರಲಿಲ್ಲ ಎಂದರೆ ಸರಿಯಲ್ಲ. ಘಟನೆಯ ದಿನ 3, 7, 11, 13 ಮತ್ತು 14ನೇ ಆರೋಪಿಗಳು ಸ್ಥಳಕ್ಕೆ ಬಂದಿರಲಿಲ್ಲ ಯಾರಿಗೂ ಹಲ್ಲೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-4 ಲಾಯರ್ ನಾರಾಯಣಸ್ವಾಮಿರವರ ಹೇಳಿಕೆಯ ಮೇರೆಗೆ 3, 7, 11, 13 ಮತ್ತು 14ನೇ ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**5 ಮತ್ತು 6ನೇ ಆರೋಪಿಗಳ ಪರ ಶ್ರೀ ಎಸ್‌ಎಸ್ ವಕೀಲರಿಂದಃ**

ನಮ್ಮ ಊರಿನಿಂದ ದೇವನಹಳ್ಳಿ ಮುಖ್ಯರಸ್ತೆ ಚಪ್ಪರದಕಲ್ಲು ರಸ್ತೆಗೆ 6ಕಿಮೀ ಅಂತರ ಇದೆ. ನಮ್ಮ ಊರಿನಿಂದ ಚಪ್ಪರದಕಲ್ಲು ರಸ್ತೆಗೆ ಬಂದರೆ ರಸ್ತೆಯ ಎಡಭಾಗಕ್ಕೆ ತಿರುಗಿ ದೇವನಹಳ್ಳಿಗೆ ಹೋಗಬೇಕು ಎಂದರೆ ಸರಿ. ದೇವನಹಳ್ಳಿಗೆ ಹೋಗುವ ಮುಖ್ಯರಸ್ತೆಗೆ ಹೊಂದಿಕೊಂಡಂತೆಯೇ ವಿಶ್ವನಾಥಪುರ ಪೋಲಿಸ್ ಠಾಣೆ ಇದೆ. ನನಗೆ, ನನ್ನ ತಂದೆಗೆ, ಗಾಯಿತ್ರಮ್ಮನಿಗೆ, ದೇವರಾಜುವಿಗೆ ಆದ ಗಾಯಗಳನ್ನು ನೋಡಿದಾಗ ಕೂಡಲೇ ಈ ವಿಚಾರವನ್ನು ಪೋಲಿಸರಿಗೆ ತಿಳಿಸಬೇಕು ಅಂದು ಅನ್ನಿಸಿತ್ತು. ದೇವನಹಳ್ಳಿಯ ವಿಜಯಪುರ ರಸ್ತೆಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದೆವು. ನಾನು ನನ್ನ ತಂದೆಗೆ ಆದ ಗಾಯಗಳನ್ನು ನೋಡಿದಾಗ ಕೂಡಲೇ ವೈದ್ಯರನ್ನು ಭೇಟಿ ಮಾಡಿ ನನ್ನ

ತಂದೆಯನ್ನು ಬದುಕಿಸಕೊಳ್ಳಬೇಕು ಎಂದು ಅನ್ನಿಸಿತ್ತು ಎಂದರೆ ಸರಿ. ನನ್ನ ಗಾಯಗಳಿಗೂ ಸಹ ವೈದ್ಯರ ಬಳಿ ಬೇಗ ಚಿಕಿತ್ಸೆ ಪಡೆಯಬೇಕು ಎಂಬ ಆತುರ ಇತ್ತು.

ದೇವನಹಳ್ಳಿ ಆಸ್ಪತ್ರೆಗೆ 7 ಜನರು ಕಾರಿನಲ್ಲಿ ಹೋದಾಗ ನನಗೆ, ನನ್ನ ತಂದೆಗೆ, ಗಾಯಿತ್ರಮ್ಮ ಮತ್ತು ದೇವರಾಜುರವರಿಗೆ ರಕ್ತಸ್ರಾವವಾಗುತ್ತಿತ್ತು. ಸದರಿ ರಕ್ತಸ್ರಾವದಿಂದ ಕಾರಿನಲ್ಲಿ ರಕ್ತವಾಗಿತ್ತು. ದೇವನಹಳ್ಳಿ ಆಸ್ಪತ್ರೆಯಲ್ಲಿ ನನ್ನ ತಂದೆಯ ಗಾಯಗಳನ್ನು ವೈದ್ಯರು ಪರೀಕ್ಷೆಮಾಡಿದ್ದರು. ವೈದ್ಯರು ನನ್ನ ತಂದೆಗೆ ರಕ್ತಸ್ರಾವ ನಿಲ್ಲಿಸಲು ಬ್ಯಾಂಡೇಜ್ ಹಾಕಿದ್ದರು ನನಗೂ ಸಹ ವೈದ್ಯರು ರಕ್ತಸ್ರಾವಕ್ಕೆ ಬ್ಯಾಂಡೇಜ್ ಹಾಕಿದ್ದರು. ದೇವನಹಳ್ಳಿ ಆಸ್ಪತ್ರೆಯಲ್ಲಿ ವೈದ್ಯರು ನನ್ನ ಬಳಿ ನನ್ನ ತಂದೆಗೆ ಯಾರು ಹೇಗೆ ಗಾಯ ಮಾಡಿದ್ದರು ಎಂದು ಕೇಳಿರಲಿಲ್ಲ ಬೆಂಗಳೂರಿಗೆ ನನ್ನ ತಂದೆಯನ್ನು ಕರೆದುಕೊಂಡು ಹೋಗುವಂತೆ ಹೇಳಿದ್ದರು. ನನಗೆ ವೈದ್ಯರು ಬ್ಯಾಂಡೇಜ್ ಹಾಕುವಾಗ ಯಾರು ಎಲ್ಲಿ ಗಾಯ ಮಾಡಿದ್ದರು ಎಂದು ಕೇಳಿದ್ದರು. ನಾನು ನನಗೆ ಯಾರು ಎಲ್ಲಿ ಗಾಯಮಾಡಿದ್ದರು ಎಂದು ವೈದ್ಯರ ಮುಂದೆ ಹೇಳಿರಲಿಲ್ಲ ನಾನು ಡಾಕ್ಟರ್ ಬಳಿ ಸ್ಟೇಟ್‌ಮೆಂಟ್ ಕೊಟ್ಟಿದ್ದೆ. ವೈದ್ಯರು ನನ್ನ ಸ್ಟೇಟ್‌ಮೆಂಟ್ ಪಡೆದು ನನ್ನ ತಂದೆಯನ್ನು ಬೋರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ಹೇಳಿದ್ದರು.

ದೇವನಹಳ್ಳಿ ಆಸ್ಪತ್ರೆಯಲ್ಲಿ ವೈದ್ಯರು ದಾಖಲಾತಿಗೆ ನನ್ನ ಸಹಿ ಪಡೆದಿದ್ದರು. ವೈದ್ಯರು ರಕ್ತವಾಗಿದ್ದ ನನ್ನ ಬಟ್ಟೆಯನ್ನು ಸಹ ನೋಡಿದ್ದರು. ನಾನು ನಮ್ಮ ಊರಿನಿಂದ ಚಪ್ಪರದಕಲ್ಲು ರಸ್ತೆಯ ಮೂಲಕ ವಿಶ್ವನಾಥಪುರ ಪೋಲಿಸ್ ಠಾಣೆಯನ್ನು ದಾಟಿ

ದೇವನಹಳ್ಳಿ ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಪೋಲಿಸರು ನಾಲ್ಕು ಬಾರಿ ಹೇಳಿಕೆ ನೀಡಿದ್ದೆ. ದಾರಿ ಬದಲಾವಣೆ ಮಾಡಿದ್ದ ಬಗ್ಗೆ ಪೋಲಿಸರು ಕೇಳದ ಕಾರಣ ನಾನು ಹೇಳಿರಲಿಲ್ಲ. ದೇವನಹಳ್ಳಿ ಆಸ್ಪತ್ರೆಯಲ್ಲಿ ನನ್ನ ತಂದೆಯನ್ನು ಬೋರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋಗು ಎಂದು ಲಿಖಿತವಾಗಿ ಬರೆದುಕೊಟ್ಟಿರಲಿಲ್ಲ ಡ್ರೈವರ್‌ಗೆ ಕೊಟ್ಟಿರಬಹುದು. ಆಂಬ್ಯುಲೆನ್ಸ್‌ನಲ್ಲಿ ಡ್ರೈವರ್ ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ.

ಬೋರಿಂಗ್ ಆಸ್ಪತ್ರೆ ನನಗೆ ಮೊದಲಿನಿಂದಲೂ ಗೊತ್ತು. ವೈದ್ಯರು ಬೋರಿಂಗ್ ಆಸ್ಪತ್ರೆಯಲ್ಲಿ ನನ್ನ ತಂದೆಯನ್ನು ನೋಡಿದ್ದರು ಸಾಕ್ಷಿ ಮುಂದುವರಿದು ನನ್ನ ತಂದೆಯನ್ನು ಪರೀಕ್ಷಿಸಿ ಮೃತರಾಗಿರುತ್ತಾರೆ ಎಂದು ಹೇಳಿದ್ದರು. ಬೋರಿಂಗ್ ಆಸ್ಪತ್ರೆಯಲ್ಲಿ ನನ್ನ ಸಹಿ ಪಡೆದಿರಲಿಲ್ಲ. 1.30ರಿಂದ ಸುಮಾರು 01.45ರ ಸಮಯದಲ್ಲಿ ವೈದ್ಯರು ನನ್ನ ತಂದೆ ಮೃತರಾದ ಬಗ್ಗೆ ಹೇಳಿದ್ದರು. ನಾನು ಬೋರಿಂಗ್ ಆಸ್ಪತ್ರೆಯಲ್ಲಿ ಸುಮಾರು ಹತ್ತು ನಿಮಿಷ ಮಾತ್ರ ಇದ್ದೆ. ಆಂಬ್ಯುಲೆನ್ಸ್ ವಾಹನದಲ್ಲೂ ಸಹ ಅದರ ಚಾಲಕ ನನ್ನ ಸಹಿಯನ್ನು ಯಾವುದೇ ದಾಖಲಾತಿಯಲ್ಲಿ ಪಡೆದಿರಲಿಲ್ಲ. ಆಂಬ್ಯುಲೆನ್ಸ್ ದೇವನಹಳ್ಳಿ ಸರ್ಕಾರಿ ಆಸ್ಪತ್ರೆಗೆ ಸೇರಿದ್ದು. ದೇವನಹಳ್ಳಿ ಆಸ್ಪತ್ರೆಯಿಂದ ಸುಮಾರು 12.30ರ ಸಮಯಕ್ಕೆ ಹೊರಟಿದ್ದೆವು. ಸುಮಾರು 2 ಗಂಟೆಗೆ ನಾನು ಬೋರಿಂಗ್ ಆಸ್ಪತ್ರೆಯಿಂದ ಹೊರಟಿದ್ದೆ. ದೇವನಹಳ್ಳಿ ಆಸ್ಪತ್ರೆಗೆ ಬಂದಾಗ ಮಧ್ಯಾಹ್ನ 02.45ರಿಂದ 03.00 ಗಂಟೆಯಾಗಿತ್ತು. ದೇವನಹಳ್ಳಿ ಆಸ್ಪತ್ರೆಯ ಗೇಟ್‌ನ ಪಕ್ಕದಲ್ಲಿ ಒಂದು ಪೋಲಿಸ್ ಠಾಣೆ ಇದೆಯೋ ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯ ಮೃತದೇಹವನ್ನು ಬೋರಿಂಗ್ ಆಸ್ಪತ್ರೆಯಿಂದ

ದೇವನಹಳ್ಳಿ ಆಸ್ಪತ್ರೆಗೆ ತೆಗೆದುಕೊಂಡು ಬಂದಾಗ ವಿಶ್ವನಾಥಪುರ ಮತ್ತು ದೇವನಹಳ್ಳಿ ಠಾಣೆಯ ಪೋಲಿಸರು ಆಸ್ಪತ್ರೆಗೆ ಬಂದಿದ್ದರು. ನಾನು ದೇವನಹಳ್ಳಿ ಆಸ್ಪತ್ರೆಗೆ ವಾಪಸ್ಸು ಬಂದಾಗ ಚಾಸಾ-2 ಮುನಿರಾಜು ಮತ್ತು ಚಾಸಾ-3 ಮಂಜುನಾಥರವರು ಮಾತನಾಡುತ್ತಿದ್ದರು ಅವರಿಗೆ ಪ್ರಜ್ಞೆ ಇತ್ತು, ದೇವನಹಳ್ಳಿ ಆಸ್ಪತ್ರೆಯಲ್ಲಿ ವಿಶ್ವನಾಥಪುರ ಮತ್ತು ದೇವನಹಳ್ಳಿ ಠಾಣೆಯ ಪೋಲಿಸರನ್ನು ನೋಡಿದಾಗ ಗಲಾಟೆಯ ವಿಚಾರವನ್ನು ಹೇಳಬೇಕು ಅಂದು ಅನ್ನಿಸಿತ್ತು, ವಿಶ್ವನಾಥಪುರ ಮತ್ತು ದೇವನಹಳ್ಳಿ ಠಾಣೆಯ ಪೋಲಿಸರು ನನಗೆ ಆಗಿದ್ದ ಗಾಯ ಮತ್ತು ರಕ್ತವನ್ನು ನೋಡಿದ್ದರು. ಆಗ ಚಾಸಾ-4 ನಾರಾಯಣಸ್ವಾಮಿ ನನ್ನೊಂದಿಗೆ ದೇವನಹಳ್ಳಿ ಆಸ್ಪತ್ರೆಯಲ್ಲಿ ಇದ್ದರು. ನಾನು ಮೊದಲಿಗೆ ದೇವನಹಳ್ಳಿ ಆಸ್ಪತ್ರೆಗೆ ಹೋದಾಗ ಚಾಸಾ-2, 3 ಮತ್ತು ಚಾಸಾ-4 ಆಸ್ಪತ್ರೆಯಲ್ಲಿ ಇದ್ದರು ನಾನು ಬೋರಿಂಗ್ ಆಸ್ಪತ್ರೆಯಿಂದ ಮತ್ತೆ ವಾಪಸ್ಸು ದೇವನಹಳ್ಳಿ ಆಸ್ಪತ್ರೆಗೆ ಹೋದಾಗಲೂ ಚಾಸಾ-2, 3 ಮತ್ತು 4ರವರು ದೇವನಹಳ್ಳಿ ಆಸ್ಪತ್ರೆಯಲ್ಲಿಯೇ ಇದ್ದರು.

ಬೋರಿಂಗ್ ಆಸ್ಪತ್ರೆಯಿಂದ ಬಂದ ನಂತರ ನಾನು ದೇವನಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ದೂರು ಕೊಟ್ಟ ನಂತರ ನಾನು ದೇವನಹಳ್ಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ನಾನು ದೂರು ಕೊಟ್ಟು ಮಧ್ಯಾಹ್ನ 04.00 ಗಂಟೆ ಸಮಯಕ್ಕೆ ದೇವನಹಳ್ಳಿ ಆಸ್ಪತ್ರೆಗೆ ಬಂದಿದ್ದೆ. ನಾನು ಸದರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ. ಸದರಿ ಆಸ್ಪತ್ರೆಯಲ್ಲಿ ಒಂದು ದಿನ ಒಳರೋಗಿಯಾಗಿ ದಾಖಲಾಗಿದ್ದೆ. ನಾನು ಒಳರೋಗಿಯಾಗಿ ದಾಖಲಾದ ನಂತರವೂ ಚಾಸಾ-4 ನಾರಾಯಣಸ್ವಾಮಿ ಅದೇ ಆಸ್ಪತ್ರೆಯಲ್ಲಿ ಇದ್ದರು. ನಾನು ಒಳರೋಗಿಯಾಗಿ ದಾಖಲಾದ ದಿನ ರಾತ್ರಿ ಆಸ್ಪತ್ರೆಯಲ್ಲಿಯೇ ಇದ್ದೆ, ಮಾರನೇ

ದಿನ ಮಧ್ಯಾಹ್ನ 1 ಗಂಟೆಗೆ ನಾನು ಆಸ್ಪತ್ರೆಯಿಂದ ಹೊರಬಂದಿದ್ದೆ. ನಾನು ದೂರು ಕೊಟ್ಟಾಗ ಪೋಲಿಸರು ನನ್ನ ಬಟ್ಟೆ ರಕ್ತವಾಗಿದ್ದನ್ನು ನೋಡಿದ್ದರು ಆಗ ಪೋಲಿಸರು ರಕ್ತವಾಗಿದ್ದ ನನ್ನ ಬಟ್ಟೆಗಳನ್ನು ಕೊಡು ಎಂದು ಕೇಳಿರಲಿಲ್ಲ. ಪೋಲಿಸರು ನನಗೆ ಬಟ್ಟೆ ಕೇಳಿದ್ದರೆ ಹಾಕಲು ಬೇರೆ ಬಟ್ಟೆ ಇಲ್ಲದ ಕಾರಣ ಪೋಲಿಸರಿಗೆ ಕೊಡುತ್ತಿರಲಿಲ್ಲ. ನಾನು ಶರ್ಟ್ ಮತ್ತು ಬನಿಯನ್ ಹಾಕಿದ್ದೆ. ಬನಿಯನ್ ಸಹ ರಕ್ತವಾಗಿತ್ತು. ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ದಾಖಲಾದಗಲೂ ವೈದ್ಯರು ನನ್ನ ಬಟ್ಟೆಗಳನ್ನು ತೆಗೆಸಿರಲಿಲ್ಲ.

ನಾನು ಮಾರನೇ ದಿನ 1 ಗಂಟೆಗೆ ಹೋದಾಗ ಪೋಲಿಸರು ಊರಿನಲ್ಲಿ ಇದ್ದರು. ನಾನು ಆಸ್ಪತ್ರೆಯಿಂದ ಊರಿಗೆ ಹೋಗಿರಲಿಲ್ಲ ನೇರವಾಗಿ ಮೃತರನ್ನು ಮಣ್ಣು ಮಾಡಲು ಸ್ಮಶಾನಕ್ಕೆ ಹೋಗಿದ್ದೆ. ಆ ದಿನ ನಾನು 3.00ರಿಂದ 3.30ರ ಸಮಯಕ್ಕೆ ಮನೆಗೆ ಹೋಗಿದ್ದೆ. ಪೋಲಿಸರು ಆ ದಿನ ಊರಿನಲ್ಲಿಯೇ ಇದ್ದರು. ನಾನು ಮನೆಗೆ ಹೋದ ನಂತರ ನನ್ನ ಬನಿಯನ್ ಮತ್ತು ಶರ್ಟ್ ಬದಲಾಯಿಸಿದ್ದೆ.

ದೂರು ಕೊಟ್ಟ ಎರಡನೇ ದಿನಕ್ಕೆ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ಪೋಲಿಸರು ರಕ್ತವಾಗಿದ್ದ ನನ್ನ ಬಟ್ಟೆಗಳನ್ನು ತರುವಂತೆ ಹೇಳಿದ್ದರಿಂದ ನಾನು ಆ ಬಟ್ಟೆಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿದ್ದೆ. ಆ ಸಮಯದಲ್ಲಿ ನನ್ನ ಬಳಿ ಮೊಬೈಲ್ ಇರಲಿಲ್ಲ. ಘಟನೆ ನಡೆದ ದಿನ ನನ್ನ ಬಳಿ ಮೊಬೈಲ್ ಇತ್ತು. ಪೋಲಿಸರು ನನ್ನ ಬಟ್ಟೆಗಳನ್ನು ಆ ದಿನ ಠಾಣೆಯಲ್ಲಿ ತಮ್ಮ ಸ್ವಾಧೀನಕ್ಕೆ ಪಡೆದಿದ್ದರು. ಪೋಲಿಸರು ಮಹಜರ್ ಬರವಣಿಗೆ ಮಾಡಿಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಬಟ್ಟೆ

ಕೊಟ್ಟಾಗ ಪೋಲಿಸರು ನನ್ನನ್ನು ಏನೂ ಕೇಳಿರಲಿಲ್ಲ. ನಾನು ಬೇರೆ ಯೂರ ಬಟ್ಟೆಗಳನ್ನು ಆ ದಿನ ಠಾಣೆಗೆ ತೆಗೆದುಕೊಂಡು ಹೋಗಿರಲಿಲ್ಲ. ಆ ದಿನ ಊರಿನಲ್ಲಿದ್ದ ಪೋಲಿಸರೇ ನನಗೆ ಬಟ್ಟೆ ತೆಗೆದುಕೊಂಡು ಹೋಗುವಂತೆ ಹೇಳಿದ್ದರು ಆದ್ದರಿಂದ ನಾನು ಎರಡನೇ ದಿನಕ್ಕೆ ಬಟ್ಟೆ ತೆಗೆದುಕೊಂಡು ಹೋಗಿದ್ದೆ. ನಾನು ಆ ದಿನ ಠಾಣೆಗೆ ಬಟ್ಟೆ ತೆಗೆದುಕೊಂಡು ಹೋಗಿದ್ದನ್ನು ಹೊರತುಪಡಿಸಿ ಬೇರೆ ಯಾವ ದಿನವೂ ಬೇರೆಯವರ ಬಟ್ಟೆಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿರಲಿಲ್ಲ.

ದೇವನಹಳ್ಳಿ ಆಸ್ಪತ್ರೆಯಿಂದ ಬೋರಿಂಗ್ ಆಸ್ಪತ್ರೆಗೆ ಹೋದಾಗ ನನ್ನ ಮೊಬೈಲ್ ಇತ್ತು. ಬೋರಿಂಗ್ ಆಸ್ಪತ್ರೆಯಲ್ಲಿ ನನ್ನ ತಂದೆ ಮೃತರಾಗಿರುತ್ತಾರೆ ಎಂದು ವೈದ್ಯರು ತಿಳಿಸಿದ್ದರು ವೈದ್ಯರ ಹೆಸರು ಗೊತ್ತಿಲ್ಲ. ದೇವನಹಳ್ಳಿ ಆಸ್ಪತ್ರೆಯಿಂದ ಬೋರಿಂಗ್ ಆಸ್ಪತ್ರೆಯಿಂದ ನನ್ನ ತಂದೆಯ ಶವ ತರುವಂತೆ ನನಗೆ ಯಾರೂ ಫೋನ್ ಕರೆ ಮಾಡಿ ಹೇಳಿರಲಿಲ್ಲ ನಾನೇ ಫೋನ್ ಮಾಡಿದ್ದೆ. ನಾನು ದೇವನಹಳ್ಳಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದಾಗ ವಿಶ್ವನಾಥಪುರ ಪೋಲಿಸ್ ಠಾಣೆಯ ಪೋಲಿಸರು ಆಸ್ಪತ್ರೆಯಲ್ಲಿದ್ದರು. ಆಗ ಚಾಸಾ-4ರವರು ಸಹ ಆಸ್ಪತ್ರೆಯಲ್ಲಿದ್ದರು. ನಾನು ಬೋರಿಂಗ್ ಆಸ್ಪತ್ರೆಯಿಂದ ದೇವನಹಳ್ಳಿ ಆಸ್ಪತ್ರೆಗೆ ಬರುವ ಮೊದಲೇ ಚಾಸಾ-4 ದೂರನ್ನು ತಯಾರು ಮಾಡಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರಿದು ನಾನು ಠಾಣೆಗೆ ಹೋದ ನಂತರ ಹೇಳಿ ಬರೆಸಿದ್ದೆ ಎಂದು ನುಡಿದಿರುತ್ತಾರೆ. ಚಾಸಾ-4 ಓದಿ ಹೇಳದೇ ಇದ್ದರೆ ನನಗೆ ದೂರಿನಲ್ಲಿ ಏನು ಇದೆ ಎಂದು ತಿಳಿಯುತ್ತಿರಲಿಲ್ಲ ಎಂದರೆ ಸರಿ. ಚಾಸಾ-4 ನನಗೆ ದೂರನ್ನು ಓದಿ ಹೇಳಿದ್ದರು. ಚಾಸಾ-4 ಓದಿ ಹೇಳದೇ ಇದ್ದರೆ ನಾನು ಬೇರೆಯವರ

ಬಳಿ ಓದಿಸಿ ತಿಳಿಯುತ್ತಿದ್ದೆ. ದೂರನ್ನು ಪೋಲಿಸ್ ಠಾಣೆಯ ದಫೇದಾರ್ ಬಳಿ ಓದಿಸಿ ತಿಳಿದಿದ್ದೆ. ನನಗೆ ಓದಿ ಹೇಳಿದ ದಫೇದಾರ್ ದೂರಿನಲ್ಲಿ ಸಹಿ ಮಾಡಿರಲಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಚಾಸಾ-4ರವರು ನನಗೆ ಓದಿ ಹೇಳಿದ್ದರು ಆದರೆ ಅವರು ದೂರಿಗೆ ಸಹಿ ಮಾಡಿರಲಿಲ್ಲ.

ನಾನು ದೂರನ್ನು ದೇವನಹಳ್ಳಿಯಲ್ಲಿ ಬರೆಸಿರಲಿಲ್ಲ ಠಾಣೆಯಲ್ಲಿ ದೂರು ಬರೆಸಿದ್ದು. ನಾನು ಠಾಣೆಗೆ ಹೋದಾಗ ಯಾವ ಹೆಸರಿನ ಪೋಲಿಸರು ಯಾವ ಹುದ್ದೆಯ ಪೋಲಿಸರು ಠಾಣೆಯಲ್ಲಿ ಇದ್ದರೋ ನನಗೆ ಈಗ ಹೇಳಲು ಆಗುವುದಿಲ್ಲ ದಫೇದಾರ್ ಮತ್ತು ಪೋಲಿಸರು ಇದ್ದರು. ಪೋಲಿಸರು ನನ್ನ ಬಟ್ಟೆಗೆ ಆಗಿದ್ದ ರಕ್ತ ನೋಡಿ ಏನಾಗಿದೆ ಎಂದು ಕೇಳಿದ್ದರು. ಪೋಲಿಸರು ದೂರನ್ನು ಯಾರು ಬರೆದದ್ದು ಎಂದು ಕೇಳಿದ್ದರು. ಪೋಲಿಸರು ನನಗೆ ಯಾರು ದೂರು ಬರೆದದ್ದು ಎಲ್ಲಿ ಬರೆದಿದ್ದು ಎಂದು ಕೇಳಿರಲಿಲ್ಲ.

ಚಾಸಾ-4ರವರು ಬೆಂಗಳೂರಿನ ಡಾಲರ್ಸ್‌ಕಾಲೋನಿಯಲ್ಲಿ ವಾಸಮಾಡುತ್ತಿದ್ದರು. ಚಾಸಾ-4ರವರ ಬಳಿ ಮೊಬೈಲ್ ವೇಳೆ ಘಟನೆಯ ವೇಳೆ ಇತ್ತೋ ಇಲ್ಲವೋ ಗೊತ್ತಿಲ್ಲ. ನಾನು ಬೋರಿಂಗ್ ಆಸ್ಪತ್ರೆಯಿಂದ ಚಾಸಾ-4ರವರಿಗೆ ನನ್ನ ತಂದೆ ಮೃತರಾಗಿದ್ದ ಬಗ್ಗೆ ತಿಳಿಸಿದ್ದೆ. ಚಾಸಾ-4ರವರು ನಾನು ಫೋನ್ ಮಾಡಿದಾಗ ನನ್ನ ತಂದೆಯ ಮೃತದೇಹವನ್ನು ದೇವನಹಳ್ಳಿಗೆ ತರಬೇಕು ಎಂದು ಹೇಳಿದ್ದರು. ನನ್ನ ತಂದೆಯನ್ನು ಬೋರಿಂಗ್ ಆಸ್ಪತ್ರೆಯ ಒಳಗೆ ಕರೆದುಕೊಂಡು ಹೋಗಿರಲಿಲ್ಲ ವೈದ್ಯರು ನನ್ನ ತಂದೆಯನ್ನು ನೋಡಿರಲಿಲ್ಲ ಎಂದರೆ ಸರಿಯಲ್ಲ.

ನಾನು ದೂರು ಬರೆಸುವಾಗ ದೊಡ್ಡಚಿನ್ನಪ್ಪನನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿಕೊಟ್ಟಿದ್ದು ಅವರು ಸಹ ಆಸ್ಪತ್ರೆಗೆ ಸೇರುವುದರಲ್ಲಿ ಮರಣ ಹೊಂದಿರುತ್ತಾರೆ ಎಂದು ಹೇಳಿ ಬರೆಸಿರಲಿಲ್ಲ. ದಿಃ14.02.2010ರಂದು ನಾನು ಬಟ್ಟೆಗಳನ್ನು ಕೊಟ್ಟಾಗ ಪೋಲಿಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರಬಹುದು ನಾನು ಸಹಿ ಮಾಡಿರಲಿಲ್ಲ. ನನ್ನ ತಮ್ಮ ನಾರಾಯಣಸ್ವಾಮಿ ಬರೆದ ದೂರಿಗೆ ನಾನು ಸಹಿ ಮಾಡಿದ್ದೆ ಎಂದು ಪೋಲಿಸರ ಮುಂದೆ ಹೇಳಿರಲಿಲ್ಲ. ದಿಃ14.02.2010ರಂದು ಪೋಲಿಸರ ಮುಂದೆ ದಿಃ12.02.2010ರಂದು ನಡೆದಿದ್ದ ಘಟನೆಯ ಬಗ್ಗೆ ನನ್ನ ತಮ್ಮ ನಾರಾಯಣಸ್ವಾಮಿ ಬರೆದಿದ್ದ ದೂರಿಗೆ ಸಹಿ ನಾನು ಮಾಡಿದ್ದೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ನಿಪಿ-1 ದೂರನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ನಮ್ಮ ಊರಿನಲ್ಲಿ ಸಾಮಾನ್ಯವಾಗಿ ಶಿವರಾತ್ರಿ ಅಥವಾ ಯುಗಾದ ಹಬ್ಬಗಳಾದಲ್ಲಿ ನೆಂಟರಿಷ್ಟರನ್ನು ಕರೆಯುವುದಿಲ್ಲ ಸಾಕ್ಷಿ ಜಾತ್ರೆಯಾದಲ್ಲಿ ಮಾತ್ರ ಕರೆಯುತ್ತೇವೆ ಎಂದು ನುಡಿದಿರತ್ತಾರೆ. ದಿಃ12.02.2010ರಂದು ಶಿವರಾತ್ರಿ ಹಬ್ಬ ಇತ್ತು, ದಿಃ11.02.2010ರಂದು ರಾತ್ರಿ ಊರಿನಲ್ಲಿ ಸಾಮಾನ್ಯವಾಗಿ ಜಾಗರಣೆ, ಉಪವಾಸ, ಹರಿಕಥೆ ಮಾಡುತ್ತಾರೆ. ನಮ್ಮ ಊರಿನಲ್ಲಿ ಅಂದಾಯ ಎಷ್ಟು ಜನಸಂಖ್ಯೆ ಇದೆಯೋ ಗೊತ್ತಿಲ್ಲ. ನನ್ನ ಬಳಿ ದ್ವಿಚಕ್ರ ವಾಹನ ಇದೆ. ನಾನು ದೇವನಹಳ್ಳಿ ಅಥವಾ ಬೇರೆ ಕಡೆ ಹೋಗಬೇಕಾದಲ್ಲಿ ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತೇನೆ. ನನ್ನ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಘಟನೆಗಿಂತ 3-4 ವರ್ಷದ ಹಿಂದಿನಿಂದಲೂ ನನ್ನ ಬಳಿ ದ್ವಿಚಕ್ರ ವಾಹನ ಇತ್ತು. ಚಾಸಾ-3 ಮಂಜುನಾಥರವರ ಬಳಿ ದ್ವಿ ಚಕ್ರ ವಾಹನ ಇದೆ.

ಗಲಾಟೆಯಾದ ಜಾಗಕ್ಕೆ ನಾನು ನನ್ನ ದ್ವಿಚಕ್ರ ವಾಹನ ತಂದಿರಲಿಲ್ಲ. ಘಟನೆ ನಡೆದ ದಿನದಿಂದ ವಿಶ್ವನಾಥಪುರ ಪೋಲಿಸ್ ಠಾಣೆಯ ಪೋಲಿಸರು ಹತ್ತು ದಿನಗಳವರೆಗೆ ಬಂದು ಹೋಗುತ್ತಿದ್ದರು. ಪೋಲಿಸರು ನಾನು ಬಿದ್ದುಹೋಗಿದ್ದ ಸ್ಥಳವನ್ನು ತೋರಿಸುವಂತೆ ಕೇಳಿರಲಿಲ್ಲ ಸಾಕ್ಷಿ ಮುಂದುವರಿದು ನಾನು ಬಿದ್ದು ಹೋಗಿರಲಿಲ್ಲ ಎಂದು ನುಡಿದಿರುತ್ತಾರೆ.

ನನ್ನ ತಂದೆ, ದೇವರಾಜು, ಗಾಯಿತ್ರಮ್ಮ, ಬಿದ್ದು ಹೋಗಿದ್ದ ಸ್ಥಳವನ್ನು ನಾನು ಪೋಲಿಸರಿಗೆ ತೋರಿಸಿರಲಿಲ್ಲ ಖಾರದ ಪುಡಿ ಬಿದ್ದಿದ್ದ ಸ್ಥಳವನ್ನು ನಾನು ಪೋಲಿಸರಿಗೆ ತೋರಿಸಿದ್ದೆ. ಶನಿವಾರ ಮಣ್ಣು ಮಾಡಿ ಬಂದ ದಿನ ಪೋಲಿಸರು ಖಾರದ ಪುಡಿ ಬಿದ್ದಿದ್ದ ಸ್ಥಳದಿಂದ ಖಾರದ ಪುಡಿ ತೆಗೆದುಕೊಂಡು ಬರೆದುಕೊಂಡಿದ್ದರು ಆಗ ಸ್ಥಳ ನೋಡಿದ್ದರು. ನಾನು ಒಬ್ಬನೇ ಪೋಲಿಸರು ಖಾರದ ಪುಡಿ ತೆಗೆದುಕೊಂಡು ಹೋಗುವಾಗ ಇದ್ದೆ ಬೇರೆ ಯಾರೂ ಇರಲಿಲ್ಲ ಪೋಲಿಸರು ಚೆಲ್ಲಿದ್ದ ಖಾರದ ಪುಡಿಯನ್ನು ತೆಗೆದುಕೊಂಡು ಬರೆದುಕೊಂಡಿದ್ದರು ನನ್ನ ಸಹಿ ಪಡೆದಿರಲಿಲ್ಲ. ಆಗ ಸುಮಾರು 5ರಿಂದ 5.30ರ ಸಮಯವಾಗಿತ್ತು. ಚಾಸಾ-4ರವರ ಮನೆಯ ಬಾಗಿಲಿನ 5-6 ಅಡಿ ಅಂತರದಲ್ಲಿ ಖಾರದ ಪುಡಿ ಬಿದ್ದಿತ್ತು. ನಾನು ಚಾಸಾ-4ರವರ ಮನೆಯ ಬಾಗಿಲು ಅಥವಾ ಚಿಲಕವನ್ನು ತೋರಿಸಿರಲಿಲ್ಲ. ದಿಃ12.02.2010ರಂದು ಆಸ್ಪತ್ರೆಯಿಂದ ಹೊರತುಪಡಿಸಿ ಅದಕ್ಕಿಂತ ಮುಂಚೆ ನಾನು ಚಾಸಾ-4ರವರಿಗೆ ಫೋನ್ ಮಾಡಿರಲಿಲ್ಲ. ಚಾಸಾ-2 ಮತ್ತು 3, ಚಾಸಾ-4ರವರಿಗೆ ಫೋನ್ ಮಾಡಿದ್ದರೋ ಗೊತ್ತಿಲ್ಲ.

ದಿಃ12.02.2010ರಂದು ಚಾಸಾ-4ರವರು ನಮ್ಮ ಊರಿಗೆ ಬಂದಿರಲಿಲ್ಲ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಫೋನ್ ಮಾಡಿದ ನಂತರ ಚಾಸಾ-4ರವರು ದೇವನಹಳ್ಳಿಗೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ-4 ತನಗೆ ಆಗದವರ ಹೆಸರುಗಳನ್ನು ನಿಪಿ-1 ದೂರಿನಲ್ಲಿ ಬರೆದುಕೊಡಿದ್ದರು ಎಂರೆ ಸರಿಯಲ್ಲ ಸಾಕ್ಷಿ ನಾನು ಹೇಳಿ ಬರೆಸಿದ್ದೆ ಎಂದು ನುಡಿದಿರುತ್ತಾರೆ. ನಾನು ನಿಪಿ-1ಕ್ಕೆ ದೇವನಹಳ್ಳಿ ಆಸ್ಪತ್ರೆಯಲ್ಲಿ ರಾತ್ರಿ 7.30ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ಮಧ್ಯಾಹ್ನ 03.30ಕ್ಕೆ ಪೋಲಿಸ್ ಠಾಣೆಗೆ ಹೋದ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ. ಪೋಲಿಸ್ ಠಾಣೆಯಲ್ಲಿ ಪೋಲಿಸರು ದೂರನ್ನು ಬರೆಸಿಕೊಂಡು ಬರುವಂತೆ ಹೇಳಿದ್ದರಿಂದ ಚಾಸಾ-4ರವರು ಪೋಲಿಸ್ ಠಾಣೆಯ ಹೊರಾಂಡದಲ್ಲಿ ದೂರನ್ನು ಬರೆದಿದ್ದರು. ನಾನು ಪಕ್ಕದ ಅಂಗಡಿಯಿಂದ ಪೇಪರ್ ಅನ್ನು ಖರೀದಿ ಮಾಡಿ ದೂರನ್ನು ಬರೆಸಿದ್ದೆ. ನಾನು ಪೇಪರ್ ತರುವವರೆಗೂ ಚಾಸಾ-4 ಪೋಲಿಸ್ ಠಾಣೆಯಲ್ಲಿ ಇದ್ದರು.

ಪೋಲಿಸ್ ಠಾಣೆಯಿಂದ ನಾನು ಮತ್ತು ಚಾಸಾ-4 ಅವರ ಕಾರಿನಲ್ಲಿ ಹೋಗಿದ್ದೆವು. ಪೋಲಿಸರು ನಮ್ಮನ್ನು ಹೇಗೆ ಎಲ್ಲಿಂದ ಬಂದಿದ್ದೀರಿ ಎಂದು ಕೇಳಿರಲಿಲ್ಲ. ನಾವು ಠಾಣೆಗೆ ಹೋದಾಗ ಚಾಸಾ-4ರವರ ಕಾರನ್ನು ಪೋಲಿಸರು ಪರೀಕ್ಷೆ ಮಾಡಿರಲಿಲ್ಲ. ನಾವು ನಮ್ಮ ಊರಿನಿಂದ ದೇವನಹಳ್ಳಿ ಆಸ್ಪತ್ರೆಗೆ ಮತ್ತು ದೇವನಹಳ್ಳಿ ಆಸ್ಪತ್ರೆಯಿಂದ ಪೋಲಿಸ್ ಠಾಣೆಗೆ ಹೋದ ಕಾರನ್ನು ಪೋಲಿಸರು ಜಪ್ತಿ ಮಾಡಿರಲಿಲ್ಲ. ಘಟನೆ ನಡೆದಾಗ ನನ್ನ ಮಗನಿಗೆ 6-7 ವರ್ಷ. ಘಟನೆ ನಡೆದ ಸಮಯದಲ್ಲಿ ಚಾಸಾ-2 ಮುನಿರಾಜುರವರ ಮನೆಯಲ್ಲಿ ಆರು ಜನ ವಾಸವಾಗಿದ್ದರು. ಘಟನೆ ನಡೆದ ಸಮಯದಲ್ಲಿ ಚಾಸಾ-3ರವರ

ಮನೆಯಲ್ಲಿ 7-8 ಜನ ವಾಸವಾಗಿದ್ದರು. ಚಾಸಾ-3ರವರ ಬಳಿ ಮೊಬೈಲ್ ಇತ್ತೊ ಇಲ್ಲವೋ ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಮೊಬೈಲ್ ನಂಬರ್ ಅನ್ನು ಪಡೆದಿರಲಿಲ್ಲ. ಚಾಸಾ-4ರವರು ಘಟನೆಯ ದಿನ ನಮ್ಮ ಊರಿಗೆ ಬಂದಿರಲಿಲ್ಲ ಅವರ ಸ್ಕಾರ್ಪಿಯೋ ಕಾರಿನಲ್ಲಿ ದೇವನಹಳ್ಳಿ ಆಸ್ಪತ್ರೆಗೆ ನಮ್ಮನ್ನು ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನವರು ಊರಿನಲ್ಲಿ ಗಲಾಟೆಯಾಗಿದೆ ಎಂದು ವಿಶ್ವನಾಥಪುರ ಪೋಲಿಸ್ ಠಾಣೆಗೆ ತಿಳಿಸಿದ್ದು ಪೋಲಿಸರೇ ನಮ್ಮ ಊರಿಗೆ ಅಂಬುಲೆನ್ಸ್‌ನಲ್ಲಿ ಬಂದಿದ್ದರು ಎಂದರೆ ಸರಿಯಲ್ಲ. ಪೊಲಿಸರೇ ಅಂಬ್ಯುಲೆನ್ಸ್ ಅನ್ನು ನಮ್ಮ ಊರಿಗೆ ತಂದಿದ್ದರು ಎಂದು ಒಪ್ಪಿಕೊಂಡರೆ ನಿಪಿ-1 ದೂರಿಗೆ ವಿರೋಧವಾಗುತ್ತದೆ ಎಂದು ಅಂಬ್ಯುಲೆನ್ಸ್ ತಂದಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5 ಮತ್ತು 6ನೇ ಆರೋಪಿಗಳು ಬೋವಿ ಜನಾಂಗದವರು ನಾನು ಸಹ ಬೋವಿ ಜನಾಂಗದವರು. ನಮ್ಮ ಊರಿನಲ್ಲಿ ಮುನಿರಾಜು, ಶಾಂತಕುಮಾರ, ನಾರಾಯಣಸ್ವಾಮಿ ಹೆಸರಿನ ಹಲವು ಜನ ಇದ್ದಾರೆ. 5ನೇ ಆರೋಪಿ ಮುನಿರಾಜು ಟ್ಯಾಕ್ಸಿ ಡ್ರೈವರ್ ಕೆಲಸ ಮಾಡುತ್ತಾರೋ ನನಗೆ ಗೊತ್ತಿಲ್ಲ. ಗಲಾಟೆಯಾದಾಗ ಆತನಿಗೆ ವಿವಾಹವಾಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಕುಟುಂಬದವರು ಚಾಸಾ-4ರವರು ಬೆಂಬಲಿಸುವ ರಾಜಕೀಯ ಪಕ್ಷಕ್ಕೆ ನಾವು ಬೆಂಬಲಿಸುತ್ತೇವೆ ಎಂದರೆ ಸರಿಯಲ್ಲ. 5 ಮತ್ತು 6ನೇ ಆರೋಪಿಗಳು ಘಟನೆ ನಡೆದಾಗ ಕಾಂಗ್ರೇಸ್ ಪಕ್ಷಕ್ಕೆ ಬೆಂಬಲಿಸಿರಬಹುದು. 5ನೇ ಆರೋಪಿಯ ತಾಯಿಯ ಹೆಸರು ಗೊತ್ತು. ಆಕೆಯ ಸರಸ್ವತಮ್ಮ ಅಂತ ಕರೆಯುತ್ತಾರೆ

ಆತನ ಹೆಸರು ವೆಂಕಟಮ್ಮ ಎಂದರೆ ಸಾಕ್ಷಿ ಸರಸ್ವತಮ್ಮ ಎಂದು ಕರೆಯುತ್ತಾರೆ ಎಂದು ನುಡಿದಿರುತ್ತಾರೆ.

ನಾನು, ಚಾಸಾ-4, ಒಂದೇ ಕುಲಸ್ಥರು. ಚಾಸಾ-4ರವರ ತಾಯಿಯ ಹೆಸರು ವೆಂಕಟಮ್ಮ. ಘಟನೆಯ ವೇಳೆ 5ನೇ ಆರೋಪಿಗೆ ನಮ್ಮ ಊರಿನಲ್ಲಿ ವ್ಯವಸಾಯದ ಜಮೀನು ಇರಲಿಲ್ಲ ಆತ ಆ ಜಮೀನನ್ನು ಮಾರಿದ್ದರ ನೀರಾವರಿ ಜಮೀನು ಇರಲಿಲ್ಲ. 5ನೇ ಆರೋಪಿಯ ತಾಯಿ ಮತ್ತು ಚಾಸಾ-4ರವರ ತಾಯಿಯ ಹೆಸರು ವೆಂಕಟಮ್ಮ ಎಂದು ಇದ್ದು ಆಸ್ತಿಯ ವಿಚಾರಕ್ಕೆ ಎಸಿ ಮತ್ತು ಡಿಸಿ ಹಾಗೂ ದೇವನಹಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ವಾಜ್ಯ ಇರುವ ಬಗ್ಗೆ ಗೊತ್ತಿಲ್ಲ. ಮೂರು ನ್ಯಾಯಾಗಳಲ್ಲಿ ಚಾಸಾ-4ರವರ ವಿರುದ್ದ ತೀರ್ಪು ಬಂದಿತ್ತು ಎಂದರೆ ಸರಿಯಲ್ಲ. ಆಗಿನಿಂದಲೂ ಚಾಸಾ-4 ಮತ್ತು 5ನೇ ಆರೋಪಿಯ ಮಧ್ಯೆ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. 6ನೇ ಆರೋಪಿ ಈಗಲೂ ಕಾಂಗ್ರೇಸ್ ಪಕ್ಷದಲ್ಲಿರುತ್ತಾರೆ ಎಂದರೆ ಗೊತ್ತಿಲ್ಲ. ಚಾಸಾ-4 ಮತ್ತು 6ನೇ ಆರೋಪಿ ಮಧ್ಯೆ ಮೊದಲಿನಿಂದಲೂ ರಾಜಕೀಯ ವಿಚಾರಕ್ಕೆ ವೈಷಮ್ಯ ಇದೆ ಎಂದರೆ ಸರಿಯಲ್ಲ.

ದಿಃ14.03.2010ರಂದು ಪೋಲಿಸರ ಮುಂದೆ 5, 6, 15ರಿಂದ 18ನೇ ಆರೋಪಿಗಳು ಘಟನೆ ನಡೆದ ದಿನ ಕೃತ್ಯದಲ್ಲಿ ಭಾಗಿಯಾಗಿದ್ದರು ಎಂದು ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ದಿಃ21.02.2010ರಂದು ನಿಡಿ-2ರಂತೆ ಶಾಂತಕುಮಾರ, ವೆಂಕಟಪ್ಪ, ನಾರಾಯಣಸ್ವಾಮಿ, ಕತ್ತೆ ಮುನಿಯಪ್ಪನ ಮಗ ನಾರಾಯಣಸ್ವಾಮಿ,

ಮುನಿರಾಜ, ವೆಂಕಟೇಶ ಗಲಾಟೆಗೆ ಬಂದಿರಲಿಲ್ಲ ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಎಂದು ಒಪ್ಪಿಕೊಂಡರೆ ಈ ಪ್ರಕರಣಕ್ಕೆ ತೊಂದರೆಯಾಗುತ್ತದೆ ಎಂದು ನಾನು ನಿಡಿ-2ರಂತೆ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ಮತ್ತು 6ನೇ ಆರೋಪಿಗಳು ಘಟನೆಯ ದಿನ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ.

6ನೇ ಆರೋಪಿ ನನ್ನ ತಂದೆಗೆ ಲಾಂಗ್‌ನಿಂದ ಹೊಟ್ಟೆಗೆ ಹೊಡೆದಿರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನಗೆ ಲಾಂಗ್ ಅನ್ನು ಈ ಪ್ರಕರಣದಲ್ಲಿ ತೋರಿಸಿರಲಿಲ್ಲ. ನಾನು ದೂರಿನಲ್ಲಿ ಮತ್ತು ಪೋಲಿಸರ ಮುಂದೆ ನೀಡಿದ ಹೇಳಿಕೆಗಳಲ್ಲಿ 5ನೇ ಆರೋಪಿ ಮುನಿರಾಜು ಚಾಕುವಿನಿಂದ ನನ್ನ ತಂದೆಯ ಎದೆಗೆ ಚುಚ್ಚಿದ್ದರು ಎಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3ರವರ ಬಟ್ಟೆಗಳಾದ ಮು.ಮಾ-11ರಿಂದ 15ನ್ನು ನಾನು ನ್ಯಾಯಾಲಯದ ಮುಂದೆ ಹೊರತುಪಡಿಸಿ ಪೋಲಿಸ್ ಠಾಣೆಯಲ್ಲಾ ಅದಕ್ಕಿಂತ ಮೊದಲು ನೋಡಿದ್ದೆ. ನನ್ನ ಬಟ್ಟೆಯನ್ನು ನಾನು ಠಾಣೆಯಲ್ಲಿ ಕೊಟ್ಟ 15 ದಿನದ ನಂತರ ಚಾಸಾ-2 ಮತ್ತು 3ರವರ ಬಟ್ಟೆಯನ್ನು ಪೋಲಿಸ್ ಠಾಣೆಯಲ್ಲಿ ನೋಡಿದ್ದರು. ಬಟ್ಟೆಗಳನ್ನು ಪೋಲಿಸರು ಮಹಜರ್ ಮಾಡಿ ಬರವಣಿಗೆ ಮಾಡಿ ನನ್ನ ಸಹಿ ಪಡೆದಿದ್ದರು.

ನ್ಯಾಯಾಲಯದ ಮುಂದೆ ನೋಡಿದ ಮೂರು ಚಾಕು, ನಾಲ್ಕು ದೊಣ್ಣೆಗಳನ್ನು ಪೋಲಿಸ್ ಠಾಣೆಯಲ್ಲಿ ಈ ಹಿಂದೆ ನೋಡಿದ್ದೆನೋ ಇಲ್ಲವೋ ನನಗೆ ಈಗ ನೆನಪಾಗುತ್ತಿಲ್ಲ. 6 ತಿಂಗಳ ಹಿಂದೆ ನನ್ನ ಪರಿಚಯಸ್ಥರು ಯಾವ ಬಟ್ಟೆ ಹಾಕಿಕೊಂಡಿದ್ದರು

ಎಂದು ಹೇಳಬಲ್ಲೆ. ಗಾಯಾಳು ಮುನಿರಾಜು ಹಾಕಿದ್ದ ಬಿಳಿ ಶರ್ಟ್ ಮತ್ತು ಬನಿಯನ್, ಸಿಮೆಂಟ್ ಕಲರ್ ಪ್ಯಾಂಟ್‌ಗೆ ರಕ್ತವಾಗಿತ್ತು ಎಂದು ನನ್ನ ನಾಲ್ಕು ಹೇಳಿಕೆಗಳಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆ ದಿವಸ ಗಾಯಾಳು ಮಂಜುನಾಥ ಆಕಾಶ ಕಲರ್‌ನ ಕೆಂಪು ಶರ್ಟ್‌ನ್ನು ಮತ್ತು ಬನಿಯನ್‌ನನ್ನು ಹಾಕಿದ್ದನು ಎಂದು ವಿಚಾರವನ್ನು ಪೋಲಿಸರ ಮುಂದೆ ನನ್ನ ಯಾವ ಹೇಳಿಕೆಯಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ.

ಆರೋಪಿಗಳು ಮೋಟಾರ್ ಸೈಕಲ್‌ನಲ್ಲಿ ಬಂದಿದ್ದರು ಎಂದು ನಾನು ಹೇಳಿದ್ದ ಮೋಟಾರ್ ಸೈಕಲ್‌ನ ಫೋಟೋಗಳನ್ನು ಪೋಲಿಸರು ನನಗೆ ತೋರಿಸಿರಲಿಲ್ಲ. ನನ್ನ, ಚಾಸಾ-4 ಮತ್ತು 6ನೇ ಆರೋಪಿಯ ಮಧ್ಯೆ ರಾಜಕೀಯ ದ್ವೇಷ ಇದ್ದ ಕಾರಣ ಇಟ್ಟಿಗೆ ಹಣ ಕೊಡುವ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮೊಂದಿಗೆ ದ್ವೇಷ ಇದ್ದು ಮೂರು ಊರಿನ ಜನರು ಗಲಾಟೆ ಮಾಡಿ ಮೂರು ಜನರನ್ನು ಸಾಯಿಸಿ ಕೊಲೆ ಮಾಡಿರುತ್ತಾರೆ. ಉಳಿದ ಮೂವರಿಗೆ ಮಾರಾಣಾಂತಿಕ ಗಾಯಗೊಳಿಸಿರುತ್ತಾರೆ ಎಂದು ಪೋಲಿಸರ ಮುಂದೆ ನೀಡಿರುವ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ನಾನು ದೂರು ಕೊಟ್ಟ ನಂತರ ದೇವನಹಳ್ಳಿ ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಗಳಲ್ಲಿ ದೂರು ಕೊಟ್ಟ ನಂತರ ದೇವನಹಳ್ಳಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಮೊದಲ ಬಾರಿಗೆ ದೇವನಹಳ್ಳಿ ಆಸ್ಪತ್ರೆಯಲ್ಲಿ ಬೆಳಗ್ಗೆ 11 ಗಂಟೆಗೆ ಚಿಕಿತ್ಸೆ ಪಡೆದಿದ್ದೆ. ನಾನು ಚಿಕಿತ್ಸೆ ಪಡೆಯುವ ವೇಳೆ ನನಗೆ ಮತ್ತು ನನ್ನ ತಂದೆಗೆ ಯಾರು

ಹೊಡೆದಿದ್ದರು ಎಂದು ತಿಳಿದಿತ್ತು. ನಾನು ಮೊದಲ ಬಾರಿಗೆ ಚಿಕಿತ್ಸೆ ಪಡೆಯುವ ವೇಳೆ ನನಗೆ ಮತ್ತು ನನ್ನ ತಂದೆಗೆ ಯಾರು ಹೊಡೆದಿದ್ದರು ಎಂದು ತಿಳಿದಿರಲಿಲ್ಲ ಎಂದರೆ ಸರಿಯಲ್ಲ.

ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಚಾಸಾ-4ರವರು ರೌಡಿಶೀಟರ್‌ನಲ್ಲಿ ಇರುತ್ತಾರೋ ನನಗೆ ಗೊತ್ತಿಲ್ಲ. ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಚಾಸಾ-4ರವರ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಶಿಕ್ಷೆಯಾಗಿತ್ತು. ಹೆಬ್ಬಾಳ ಪೋಲಿಸ್ ಠಾಣೆಯಲ್ಲಿ ಚಾಸಾ-4ರವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತೋ ಗೊತ್ತಿಲ್ಲ. ನನ್ನ ನಾಲ್ಕು ಹೇಳಿಕೆಯಲ್ಲಿ ಚಾಸಾ-4ರವರೊಂದಿಗೆ ಮಧ್ಯಾಹ್ನ 03.30ಕ್ಕೆ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದೆ ಎಂದು ಹೇಳಿರಲಿಲ್ಲ. ಚಾಸಾ-4ರವರು ನನಗೆ ಹೇಳಿಕೊಟ್ಟ ಮೇರೆಗೆ 5 ಮತ್ತು 6ನೇ ಆರೋಪಿಗಳು ಗಲಾಟೆ ವೇಳೆ ಸ್ಥಳದಲ್ಲಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4, 15ರಿಂದ 19ನೇ ಆರೋಪಿಗಳ ಪರ ಶ್ರೀ ಟಿಎಸ್ ವಕೀಲರಿಂದಃ**

ನಿಪಿ-1ರಲ್ಲಿ ನಮೂದು ಮಾಡಿರುವ ಹತ್ತು ಜನ ಆರೋಪಿಗಳಲ್ಲಿ ಇಬ್ಬರು ಪಂಡಿತಪುರದವರು ಉಳಿದವರು ನಮ್ಮ ಊರಿನವರು. ನಮ್ಮ ಊರಿನ ಎಲ್ಲಾ ಆರೋಪಿಗಳು ಎಸ್‌ಸಿ ಜಾತಿಗೆ ಸೇರಿದವರು. ಆರೋಪಿ 4 ಮತ್ತು 17ರವರು ಸಂಬಂಧಿಕರು. 18 ಮತ್ತು 19ನೇ ಆರೋಪಿಗಳು ನನ್ನ ದೂರದ ಸಂಬಂಧಿಕರು. 4ರಿಂದ 6, 15ರಿಂದ 19ನೇ ಆರೋಪಿಗಳು ಚಾಸಾ-4ರವರ ಮನೆಗೆ ಹತ್ತಿರದಲ್ಲೇ ವಾಸವಾಗಿದ್ದಾರೆ.

ಆರೋಪಿಗಳಾದ 6, 15 ಮತ್ತು 16ರವರು ಒಂದೇ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದರು. 6, 15 ಮತ್ತು 16ನೇ ಆರೋಪಿಗಳ ಮನೆ ಚಾಸಾ-4ರವರ ಮನೆಯಿಂದ ಸುಮಾರು 50-60 ಅಡಿ ಅಂತರ ಇರಬಹುದು. ನನ್ನ ತಂದೆ ಮತ್ತು ನನ್ನ ಸಹೋದರರು ಚಾಸಾ-4ರವರ ಮನೆಯಲ್ಲಿ ವಾಸವಾಗಿರುತ್ತಾರೆ ನಾನು ಪ್ರತ್ಯೇಕ ಮನೆಯಲ್ಲಿ ವಾಸವಾಗಿರುತ್ತೇನೆ. ನಮ್ಮ ಊರಿನ ಎಂಟು ಆರೋಪಿಗಳಿಗೂ ನಮಗೂ ಮತ್ತು ನಮ್ಮ ಕುಟುಂಬದವರಿಗೂ ಎಂದಿಗೂ ಗಲಾಟೆಯಾಗಿರಲಿಲ್ಲ. ಚಾಸಾ-4 ಮತ್ತು ನಮ್ಮ ಊರಿನ ಎಂಟು ಆರೋಪಿಗಳ ಮಧ್ಯೆ ಗಲಾಟೆಯಾಗಿರಲಿಲ್ಲ. 4ನೇ ಆರೋಪಿ ಗೋವಿಂದರಾಜು ನನ್ನ ತಂದೆಯ ಮನೆಯ ಪಕ್ಕದಲ್ಲಿ ಚಿಲ್ಲರೆ ಅಂಗಡಿ ಇಟ್ಟುಕೊಂಡಿದ್ದಾರೆ. 4ನೇ ಆರೋಪಿ ಮತ್ತು ಚಾಸಾ-4ರವರ ಮಧ್ಯೆ ಈ ಪ್ರಕರಣದ ಗಲಾಟೆಗಿಂತ ಮೊದಲು ಗಲಾಟೆ ಅಥವಾ ದ್ವೇಷ ಇರಲಿಲ್ಲ. 18 ಮತ್ತು 19ನೇ ಆರೋಪಿಗಳ ಮತ್ತು ಚಾಸಾ-4ರವರ ಮಧ್ಯೆ ಘಟನೆಗಿಂತಲೂ ಮುಂಚಿನಿಂದಲೂ ಸಿವಿಲ್ ವ್ಯಾಜ್ಯ ನಡೆಯುತ್ತಿದೆ.

ಚಾಸಾ-4ರವರು ಕಟ್ಟಡ ನಿರ್ಮಾಣ ಮಾಡುತ್ತಿದ್ದು 1ನೇ ಆರೋಪಿಯಿಂದ ಇಟ್ಟಿಗೆ ಖರೀದಿ ಮಾಡುತ್ತಿದ್ದರು. ಕಟ್ಟದ ನಿರ್ಮಾಣ ಮಾಡುವಾಗ ಕಟ್ಟಡದ ನೆಲಮಹಡಿಯಲ್ಲಿ ವಾಸವಾಗಿರಲಿಲ್ಲ ಪಕ್ಕದಲ್ಲಿ ಶೀಟ್ ಹಾಕಿದ್ದ ಮನೆಯಲ್ಲಿ ವಾಸವಾಗಿದ್ದರು. ಶೀಟ್ ಮನೆಯಲ್ಲಿ, ಚಾಸಾ-4, ಅವರ ತಂದೆ, ಅವರ ಅಣ್ಣ, ಅತ್ತಿಗೆ, ಅವರ ತಾಯಿ ಒಟ್ಟಿಗೆ ವಾಸವಾಗಿದ್ದರು. ಚಾಸಾ-4ರವರ ಜಮೀನನ್ನು ಅವರ ಸಹೋದರ ಮುನಿರಾಜು ನೋಡಿಕೊಳ್ಳುತ್ತಿದ್ದರು. ಚಾಸಾ-4ರವರ ಬೆಂಗಳೂರಿನ ಮನೆಯನ್ನು ನಾನು ನೋಡಿಲ್ಲ.

ಮಂಜುನಾಥ ಚಾಸಾ-4ರವರಿಗೆ ಕಪಾಳಕ್ಕೆ ಹೊಡೆದಿದ್ದರು ಎಂದು ನಂತರ ಚಾಸಾ-4ರವರನ್ನು ನಾವು ಮನೆಯ ಒಳಗಡೆ ಕೂಡಿ ಹಾಕಿದ್ದೆವು ಎಂದು ನಾನು ಪೋಲಿಸರ ಮುಂದೆ ಹೇಳಿದ ನಾಲ್ಕು ಹೇಳಿಕೆಯಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-8 ವೆಂಕಟಸ್ವಾಮಿ, ಚಾಸಾ-9 ಶಾಮಣ್ಣ, ಚಾಸಾ-22 ತಿಮ್ಮಯ್ಯ, ವೆಂಕಟೇಶ ಬಿನ್ ವೆನ್ನಿಪಲ್ಲಿ ಗುರುಮೂರ್ತಿ ಗಲಾಟೆ ಬಿಡಿಸಲು ಬಂದಿರಲಿಲ್ಲ. ಈ ರೀತಿ ದೂರಿನಲ್ಲಿ ಬರವಣಿಗೆ ಮಾಡಿದ ವಿಚಾರ ನನಗೆ ತಿಳಿದಿಲ್ಲ. ಗಲಾಟೆಯಾದ ನಂತರ ಕೊನೆಯಲ್ಲಿ ಬಂದಿದ್ದರು. ವೆಂಕಟಪ್ಪ ಮತ್ತು ಗುರುಮೂರ್ತಿ ಬಿದ್ದವರನ್ನು ಕಾರಿಗೆ ಎತ್ತಿಹಾಕಲು ಬಂದಿದ್ದರು. ನನ್ನನ್ನು, ಚಾಸಾ-2ರಿಂದ 5ರವರನ್ನು ಹೊರತುಪಡಿಸಿ ಬೇರೆ ಯಾರೂ ನಮ್ಮ ಊರಿನವರು ಗಲಾಟೆ ಸ್ಥಳಕ್ಕೆ ಬಂದಿರಲಿಲ್ಲ ದೂರದಲ್ಲಿ ನಿಂತಿದ್ದರು.

ಚಾಸಾ-6ರಿಂದ 9, 11ರಿಂದ 23ರವರು ನಮ್ಮ ಊರಿನ ವಾಸಿಗಳು ದೂರದಲ್ಲಿಯೇ ನಿಂತು ಗಲಾಟೆ ನೋಡಿದ್ದರು. 6ನೇ ಆರೋಪಿ ಶಾಂತಕುಮಾರ್ ನನ್ನ ತಂದೆಗೆ ಹಲ್ಲೆ ಮಾಡಿದ್ದ ಬಗ್ಗೆ ನನ್ನ ಯಾವುದೇ ಹೇಳಿಕೆಗಳಲ್ಲಿ ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ. 15ನೇ ಆರೋಪಿ ನನ್ನ ತಂದೆಗೆ ಚಾಕುವಿನಿಂದ ಚುಚ್ಚಿದ್ದರು ಎಂದು ನನ್ನ ಯಾವುದೇ ಮರುಹೇಳಿಕೆಗಳಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. 16ನೇ ಆರೋಪಿ ನನ್ನ ತಮ್ಮದೇವರಾಜುವಿಗೆ ಚಾಕುವಿನಿಂದ ಚುಚ್ಚಿದ್ದರು ಮತ್ತು ಆತನ ಮರ್ಮಾಂಗಕ್ಕೆ ಕಾಲಿನಿಂದ ಒದ್ದಿದ್ದರು ಎಂದು ನನ್ನ ಯಾವುದೇ ಮರುಹೇಳಿಕೆಗಳಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. 19ನೇ ಆರೋಪಿ ಮುನಿರಾಜು ಚಾಕುವಿನಿಂದ ನನ್ನ ಸೊಂಟಕ್ಕೆ ಚುಚ್ಚಿದ್ದರು

ಎಂದು ಪೋಲಿಸರ ಮುಂದೆ ನೀಡಿದ ನನ್ನ ಯಾವುದೇ ಮರುಹೇಳಿಕೆಗಳಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ.

5ನೇ ಆರೋಪಿ ಮುನಿರಾಜು ಚಾಸಾ-2 ಮುನಿರಾಜಪ್ಪನಿಗೆ ಚಾಕುವಿನಿಂದ ಎದೆಗೆ ಚುಚ್ಚಿದ್ದರು ಎಂದು ಪೋಲಿಸರ ಮುಂದೆ ನೀಡಿದ ನನ್ನ ಯಾವುದೇ ಮರುಹೇಳಿಕೆಗಳಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. 18ನೇ ಆರೋಪಿ ನಾರಾಯಣಸ್ವಾಮಿ ಮುನಿರಾಜುವಿಗೆ ದೊಣ್ಣೆಯಿಂದ ತಲೆಗೆ ಹೊಡೆದಿದ್ದರು ಎಂದು ಪೋಲಿಸರ ಮುಂದೆ ನೀಡಿದ ನನ್ನ ಯಾವುದೇ ಮರುಹೇಳಿಕೆಗಳಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. 4ನೇ ಆರೋಪಿ ಗೋವಿಂದರಾಜು ನನ್ನ ತಮ್ಮ ಮಂಜುನಾಥನಿಗೆ ಚಾಕುವಿನಿಂದ ಬಲಸೊಂಟಕ್ಕೆ ತಿವಿದಿದ್ದನು ಎಂದು ಪೋಲಿಸರ ಮುಂದೆ ನೀಡಿದ ನನ್ನ ಯಾವುದೇ ಮರುಹೇಳಿಕೆಗಳಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ. 17ನೇ ಆರೋಪಿ ವೆಂಕಟೇಶ ನನ್ನ ತಮ್ಮ ಮಂಜುನಾಥನಿಗೆ ದೊಣ್ಣೆಯಿಂದ ತಲೆಗೆ ಹೊಡೆದಿದ್ದರು ಎಂದು ಪೋಲಿಸರ ಮುಂದೆ ನೀಡಿದ ನನ್ನ ಯಾವುದೇ ಮರುಹೇಳಿಕೆಗಳಲ್ಲಿ ಹೇಳಿರಲಿಲ್ಲ ಎಂದರೆ ಸರಿಯಲ್ಲ.

ಆರೋಪಿ 6, 15ರಿಂದ 19ರವರು ಕೃತ್ಯದಲ್ಲಿ ಭಾಗವಹಿಸಿರಲಿಲ್ಲ ಎಂದು ದಿಃ21.02.2010ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ನಾನು ಚಾಸಾ-4ರವರ ಮಾತು ಕೇಳಿ ಆರೋಪಿ 6, 15ರಿಂದ 19ರವರು ಕೃತ್ಯದಲ್ಲಿ ಭಾಗವಹಿಸಿದ್ದರು ಎಂದು ಅವರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ನಮ್ಮ ಊರಿನ ಎಲ್ಲಾ ಆರೋಪಿಗಳ ವಿರುದ್ದ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2 ಮತ್ತು 10ನೇ ಆರೋಪಿಗಳ ಪರ ಶ್ರೀ ಎಸ್ಆರ್ ವಕೀಲರಿಂದಃ**

ವಕೀಲರು ತಮ್ಮ ಹಿರಿಯ ವಕೀಲರು ಈ ದಿನ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗದೇ ಇರುವುದರಿಂದ ಪಾಟೀ ಸವಾಲಿಗಾಗಿ ಸಮಯಕೋರಿದ್ದು ದಿಃ09.02.2021ಕ್ಕೆ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.